# ಪುತ್ಥಳಿ ಬದಲಾವಣೆಯಲ್ಲಿ ಲೋಪವಾಗಿಲ್ಲ

## ಅಯೂಬ್ ಖಾನ್ ಸ್ಪಷ್ಟನೆ | ರಾಜಕೀಯ ಪ್ರೇರಿತ ಆರೋಪ ಹಾಗೂ ಪುತ್ಥಳಿಗಳ ಕುರಿತ ವಿವರಣೆ

ಮೈಸೂರು: ಡಾ. ರಾಜಕುಮಾರ್ ಹಾಗೂ ಸ್ವಾಮಿ ವಿವೇಕಾನಂದರ ಪುತ್ಥಳಿಗಳ ಬದಲಾವಣೆಯಲ್ಲಿ ಯಾವುದೇ ಲೋಪ ಎಸಗಿಲ್ಲ. ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ ಅವರು ರಾಜಕೀಯಕ್ಕಾಗಿ ಈ ಆರೋಪ ಮಾಡಿದ್ದಾರೆ. ತಾವು ದಾಖಲೆಯೊಂದಿಗೆ ಚರ್ಚೆಗೂ ಸಿದ್ಧರಿದ್ದು, ತಮ್ಮ ಅವಧಿಯಲ್ಲಿ ಯಾವುದೇ ಭ್ರಷ್ಟಾಚಾರ ಆಗಿಲ್ಲ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅವರು ಸ್ಪಷ್ಟಪಡಿಸಿದರು.

ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿನ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ತಾವೂ ಕೂಡ ಡಾ.ರಾಜಕುಮಾರ್ ಅವರ ಅಭಿಮಾನಿಯಾಗಿದ್ದು, ಪರ–ವಿರೋಧ ಚರ್ಚೆಯ ನಂತರ ವಷ್ಟೇ ಡಾ.ರಾಜಕುಮಾರ್ ಅವರ ಹಳೆಯ ಪ್ರತಿಮೆಯನ್ನು ತೆರವು ಮಾಡಲಾಗಿದೆ. ಅದರ ಬದಲಾಗಿ ಮಯೂರ ಸಿನಿಮಾಗೆ ಹೋಲಿಕೆಯಾಗುವಂತಹ ಮೂರ್ತಿಯನ್ನು ವಸ್ತು ಪ್ರದರ್ಶನ ದ್ವಾರದ ಬಳಿ ಸ್ಥಾಪಿಸಲಾಗಿದೆ. ಈ ಕುರಿತು 2025ರ ಜುಲೈ 18ರಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಡಾ.ರಾಜಕುಮಾರ್ ಮತ್ತು ಪುನೀತ್ ರಾಜಕುಮಾರ್ ಪ್ರತಿಮೆಗಳನ್ನು ವಸ್ತು ಪ್ರದರ್ಶನದ ಮುಂಭಾಗದಲ್ಲಿ ಸ್ಥಾಪಿಸಲು ಅನುದಾನ ನೀಡುವಂತೆ ಕಾನೂನುಬದ್ಧವಾಗಿ ಮನವಿ ಮಾಡಿದ್ದೇನೆ ಎಂದು ವಿವರಿಸಿದರು.

### ವಸ್ತು ಪ್ರದರ್ಶನದ ಅಭಿವೃದ್ಧಿ ಹಾಗೂ ಆದಾಯ ಹೆಚ್ಚಳ

ವರ್ಷದಲ್ಲಿ ಮೂರು ತಿಂಗಳು ನಡೆಯುವ ವಸ್ತು ಪ್ರದರ್ಶನವನ್ನು ಪ್ರತಿ ವರ್ಷ ಸುಮಾರು ಎಂಟು ಲಕ್ಷ ಮಂದಿ ವೀಕ್ಷಿಸುತ್ತಾರೆ. ಇದನ್ನು ಮತ್ತಷ್ಟು ಅಭಿವೃದ್ಧಿಪಡಿಸಿ ಹೆಚ್ಚಿನ ಜನರನ್ನು ಆಕರ್ಷಿಸಲು ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಕಳೆದೆರಡು ವರ್ಷಗಳಲ್ಲಿ ವಸ್ತು ಪ್ರದರ್ಶನದ ಚಿತ್ರಣವನ್ನು ಸಂಪೂರ್ಣ ಬದಲಾಯಿಸಿದ್ದು, ವೀಕ್ಷಕರ ಸಂಖ್ಯೆ ಹಾಗೂ ಆದಾಯ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಈ ಮೂಲಕ ಪ್ರಾಧಿಕಾರವು ತನ್ನದೇ ಆದ ಛಾಪು ಮೂಡಿಸಿದ್ದು, ದೆಹಲಿಯ ಪ್ರಗತಿ ಮೈದಾನ ಹೊರತುಪಡಿಸಿದರೆ ಮೈಸೂರು ದಸರಾ ವಸ್ತು ಪ್ರದರ್ಶನ ಎರಡನೇ ಸ್ಥಾನ ಪಡೆದಿದೆ. ಇದಕ್ಕೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೀಡಿದ ಕೊಡುಗೆಯೇ ಪ್ರಮುಖ ಕಾರಣವಾಗಿದೆ. ಆದರೆ ವಸ್ತು ಪ್ರದರ್ಶನ ಮೇಲೇರುತ್ತಿರುವುದನ್ನು ಕಂಡು ಕೆಲವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ, ಈ ಕಾರಣಕ್ಕಾಗಿಯೇ ವಿನಾಕಾರಣ ಆರೋಪಿಸುತ್ತಿದ್ದಾರೆ ಎಂದು ಅಯೂಬ್ ಖಾನ್ ಅಸಮಾಧಾನ ವ್ಯಕ್ತಪಡಿಸಿದರು.

ಈ ಸುದ್ದಿಗೋಷ್ಠಿಯಲ್ಲಿ ಮಾಜಿ ಉಪಮೇಯರ್ಗಳಾದ ಶ್ರೀಧರ್, ಸುಹೇಲ್ ಬೇಗ್, ಕಾಂಗ್ರೆಸ್ ಮುಖಂಡ ರಘುರಾಜೇಅರಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



### ಗಣ್ಯರಿಗೆ ಅಪಮಾನ ಮಾಡಿಲ್ಲ, ನಾಮಕರಣದ ಸಮರ್ಥನೆ

ತಾವು ಮೇಯರ್ ಆಗಲು ಡಾ. ರಾಜಕುಮಾರ್ ಅವರೇ ಪ್ರೇರಣೆ ಎಂದು ಹಲವಾರು ಬಾರಿ ಹೇಳಿದ್ದು, ಅತ್ಯಂತ ಸೌಮ್ಯ ಸ್ವಭಾವದ ಡಾ. ರಾಜಕುಮಾರ್ ಅವರ ನಡೆನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ. ತಾವು ಎಂದಿಗೂ ಅವರ ಬಗ್ಗೆ ಅಪಪ್ರಚಾರ ಮಾಡಿಲ್ಲ. ಅದೇ ರೀತಿ ಕಾಮಗಾರಿ ಆರಂಭದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ಸುರಕ್ಷಿತವಾಗಿ ತೆಗೆದಿಟ್ಟಿದ್ದು, ಅದನ್ನು ಸೂಕ್ತ ಸ್ಥಳದಲ್ಲಿ ಪ್ರತಿಷ್ಠಾಪಿಸಲು ಸಲಹೆ ಕೊಡುವಂತೆ ಸ್ಥಳೀಯ ಶಾಸಕ ಶ್ರೀವತ್ಸ ಅವರಿಗೆ ಪತ್ರ ಬರೆದು ಮನವಿ ಮಾಡಲಾಗಿದೆ. ತಾವು ಸ್ವಾಮಿ ವಿವೇಕಾನಂದರಿಗೆ ಅಪಮಾನ ಮಾಡಿಲ್ಲ ಹಾಗೂ ಸಂಸ್ಕೃತಿ ನಾಶ ಮಾಡಲು ಬಂದಿಲ್ಲ ಎಂದು ಸ್ಪಷ್ಟಪಡಿಸಿದರು. ಸಾಹಿತಿಗಳ ಮಾರ್ಗದ ಹೆಸರನ್ನು ಬದಲಾಯಿಸಿಲ್ಲ, ಕೇವಲ ಸಂಕೀರ್ಣಕ್ಕೆ ಮಾತ್ರ 'ಸಿದ್ದರಾಮಯ್ಯ ಅಂಗಳ' ಎಂದು ಹೆಸರಿಡಲಾಗಿದೆ. ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ಕೋಟ್ಯಂತರ ಅನುದಾನ ನೀಡಿದ ಸಿದ್ದರಾಮಯ್ಯ ಅವರ ಹೆಸರಿಟ್ಟಿದ್ದು ತಪ್ಪೇ ಎಂದು ಅವರು ಪ್ರಶ್ನಿಸಿದರು.



### ಕಾಮಗಾರಿಗಳ ವೆಚ್ಚ ಹಾಗೂ ಮ್ಯೂಸಿಕಲ್ ಫೌಂಟೇನ್ ವಿವರ

ಅವರು ಹೇಳಿರುವಂತೆ ಇಲ್ಲಿ ಕೋಟಿ ಕೋಟಿ ಲೂಟಿಯಾಗಿಲ್ಲ. ಪ್ರಾಧಿಕಾರಕ್ಕೆ ಬರಬೇಕಾಗಿದ್ದ 20 ಕೋಟಿ ಅನುದಾನದ ಪೈಕಿ ಸರ್ಕಾರದಿಂದ ಇದುವರೆಗೆ ಕೇವಲ 10 ಕೋಟಿ ಅನುದಾನ ಮಾತ್ರ ಬಂದಿದೆ. ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ಬೇಲೂರು ಮತ್ತು ಹಳೇಬೀಡು ಶೈಲಿಯಲ್ಲಿ ನಿರ್ಮಾಣ ಮಾಡಿ, ನಂದಿ ಹಾಗೂ ಹೊಯ್ಸಳರ ಲಾಂಛನ ಅಳವಡಿಸಿರುವುದು ತಪ್ಪೇ? ಇದಕ್ಕೆ ಏಳೆಂಟು ಕೋಟಿ ಹಣ ಬೇಕಿತ್ತೇ ಎಂದು ಪ್ರಶ್ನಿಸಿದ ಅವರು, ಕಾಮಗಾರಿಯನ್ನು ಗುಣಮಟ್ಟದಿಂದ ಮಾಡಿಸಲಾಗಿದೆ ಎಂದರು. ಕಲ್ಲಿನಿಂದ ನಿರ್ಮಾಣ ಮಾಡಬೇಕಿತ್ತು ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿ, ಕಲ್ಲಿನಿಂದ ಮಾಡಲು 30ರಿಂದ 40 ಕೋಟಿ ಹಣದ ಅಗತ್ಯವಿರುವುದರಿಂದ ಕಡಿಮೆ ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮ್ಯೂಸಿಕಲ್ ಫೌಂಟೇನ್ ಬಗ್ಗೆ ಮಾತನಾಡುವ ಬದಲು ಕಾಮಗಾರಿಗೆ ಸಂಬಂಧಿಸಿದ ಕಡತಗಳನ್ನು ತರಿಸಿಕೊಂಡು ಪರಿಶೀಲನೆ ಮಾಡಬಹುದಿತ್ತು, ಆದರೆ ನಾಲಿಗೆ ಇದೆ ಎಂದು ಮನಬಂದಂತೆ ಮಾತನಾಡಿದ್ದಾರೆ ಎಂದರು. ಫೌಂಟೇನ್ ನಿರ್ಮಾಣಕ್ಕೆ 9 ಕೋಟಿಗೂ ಹೆಚ್ಚು ಹಣ ಖರ್ಚಾಗಿದ್ದು, ಕೆಆರ್ಎಸ್ನಲ್ಲಿ ಅಳವಡಿಸಿರುವ ಫೌಂಟೇನ್ಗಿಂತಲೂ ಒಂಬತ್ತು ಪಟ್ಟು ಹೆಚ್ಚಾಗಿ ನಿರ್ಮಿಸಲಾಗಿದೆ. ಕೆಆರ್ಎಸ್ ಫೌಂಟೇನ್ಗೆ ಹೋಲಿಸಿದರೆ ವಸ್ತು ಪ್ರದರ್ಶನ ಆವರಣದಲ್ಲಿ ನಿರ್ಮಿಸಿರುವ ಕಾರಂಜಿಗೆ 18 ಕೋಟಿ ಹಣ ವ್ಯಯವಾಗುತ್ತಿತ್ತು. ಆದರೆ ನಿಯಮಬದ್ಧವಾಗಿ ಟೆಂಡರ್ ಕರೆದು ಕಾಮಗಾರಿ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

### ರಾಜಕೀಯ ಗಿಮಿಕ್ ಆರೋಪ

ನಾಲಿಗೆ ಇದೆ ಎಂದಾಕ್ಷಣ ಏನೇನೋ ಮಾತನಾಡು ವುದು ಸರಿಯಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವ ಜನಪ್ರತಿನಿಧಿ ಈ ರೀತಿ ಮಾತನಾಡಬಾರದು ಹಾಗೂ ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡಲು ರಘು ಕೌಟಿಲ್ಯ ಅವರಿಗೆ ಯಾವುದೇ ನೈತಿಕತೆ ಇಲ್ಲ. ಇನ್ನು ಮುಂದೆ ಸಿದ್ದರಾಮಯ್ಯ ವಿರುದ್ಧ ಮಾತನಾಡಿದರೆ ಸಹಿಸಲು ಸಾಧ್ಯವಿಲ್ಲ ಎಂದು ಅವರು ಎಚ್ಚರಿಸಿದರು. ತಾವು ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾದ ದಿನದಿಂದಲೂ ತಮ್ಮ ವಿರುದ್ಧ ಸಂಚು ನಡೆಸುತ್ತಿದ್ದು, ತಾವು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುವುದರಿಂದ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಮುಸ್ಲಿಂ ಆಗಿ ಹುಟ್ಟಿರುವುದೇ ತಪ್ಪೇ ಎಂದು ಪ್ರಶ್ನಿಸಿದ ಅವರು, ರಘು ಮಾಡಿರುವ ಆರೋಪಗಳು ಕೇವಲ ರಾಜಕೀಯ ಗಿಮಿಕ್ ಆಗಿವೆ ಹಾಗೂ ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡಲು ಸಿದ್ಧನಿದ್ದೇನೆ ಎಂದು ಸವಾಲು ಹಾಕಿದರು.



ಮೊದಲ ಪುಟದಿಂದ

### ಕರಾವಳಿ ಸಭೆ ಬೂಟಾಟಿಕೆ:

ಡಿ.ಕೆ.ಶಿವಕುಮಾರ್ ಏನೇನೋ ಹೇಳಿಕೊಂಡು ಓಡಾಡುತ್ತಿದ್ದಾರೆ. ಸಿಎಂ ಸ್ಪೀಡ್ ಗೆ ಬಹಳ ಬೇಗ ಬ್ರೇಕ್ ಬೀಳುತ್ತದೆ. ಕಾಂಗ್ರೆಸ್ ಮಾತುಗಳನ್ನು ನಂಬಲು ಕರಾವಳಿ ಜನರೇನು ದಡ್ಡರಾ? ಕರಾವಳಿ ಜನಕ್ಕೆ ದೇಶ ಬೇಕು. ದೇಶ ಉಳಿಸುವವರು ಬೇಕು. ದೇಶ ವಿಭಜನೆ ಮಾಡುವವರು ಅವರಿಗೆ ಬೇಡ. ಕರಾವಳಿ ಜನಕ್ಕೆ ಮೋದಿ ಬೇಕು. ವೋಟ್ ಬ್ಯಾಂಕ್ ರಾಜಕಾರಣ ಮಾಡುವ ಕಾಂಗ್ರೆಸ್ ಬೇಡ ಎಂದು ಹೇಳಿದರು. ಕಾಂಗ್ರೆಸ್ ಗೊಂದಲದ ಗೂಡಾಗಿದೆ. ವಂದೇ ಮಾತರಂ ಗೀತೆಯೂ ಕಾಂಗ್ರೆಸ್ ಗೆ ಅರ್ಥ ಆಗಿಲ್ಲ. ಅವರಿಗೆ ರಾಷ್ಟ್ರಕ್ಕಿಂತ ಯಾರನ್ನೋ ಓಲೈಸಬೇಕು. ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ತಮ್ಮ ಭಾಷೆಯಿಂದಲೇ ತಮ್ಮ ಅಧ್ಯಕ್ಷಗಿರಿ ಘನತೆಯನ್ನು ಕಡಿಮೆ ಮಾಡುತ್ತಾರೆ. ಗಣೇಶಮೂರ್ತಿ ಉತ್ಸವ ದೇಶದಲ್ಲಿ ನಡೆಯದಿದ್ದರೆ ಕಾಂಗ್ರೆಸ್ ಈ ದೇಶದಲ್ಲಿ ಇರುತ್ತಿರಲಿಲ್ಲ. ಈಗ ಗಣೇಶ ಮೂರ್ತಿ ಉತ್ಸವಕ್ಕೆ ಅಡ್ಡಿ ಮಾಡುತ್ತಾರೆ ಎಂದು ಆರೋಪಿಸಿದರು.

### ಎಲ್ಲೋ ಜೋಗಪ್ಪ ನಿನ್ನ ಅರಮನೆ

ಕಾಲದಲ್ಲಿ ಜಾಗಟೆ ಹೊಡೆದುಕೊಂಡು ಹೋಗ್ತಾ ಇದ್ದರು. ಈ ಸರ್ಕಾರವೂ ಹಾಗೆ. ಎಲ್ಲೋ ಜೋಗಪ್ಪ ನಿನ್ನ ಅರಮನೆ ಹಾಡಿನ ಹಾಗೆ ಆಗಿದೆ ಎಂದು ಲೇವಡಿ ಮಾಡಿದರು.

ದೇವೇಗೌಡರ ಮುಖ ನೋಡಿ ಒಕ್ಕಲಿಗರು ಮತ ಹಾಕ್ತಾರೆ ಎಂಬ ಮಾಜಿ ಸಚಿವ ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ರಾಜಣ್ಣ ಅವರ ಭಾವನೆ ಹೇಳಿದ್ದಾರೆ. ಅವರ ಹೇಳಿಕೆ ಅತಿಶಯೋಕ್ತಿಯಲ್ಲ. ಒಕ್ಕಲಿಗ ಸಮಾಜ 30–40 ವರ್ಷಗಳಿಂದ ದೇವೇಗೌಡರ ಹೋರಾಟದ ಹಿನ್ನಲೆಯಲ್ಲಿ ನಮ್ಮ ಪಕ್ಷಕ್ಕೆ ಬೆಂಬಲ ಕೊಟ್ಟಿದ್ದಾರೆ ಎಂದು ತಿಳಿಸಿದರು.

# ಯುವಶಕ್ತಿಗೆ ಹೊಸ ಅವಕಾಶ

ಲಕ್ಷಾಂತರ ಯುವಕರಿಗೆ ತರಬೇತಿ ಹಾಗೂ ಉದ್ಯೋಗಾನುಭವ ಕಲ್ಪಿಸಲಾಗಿದೆ. ಇದರಿಂದ ಯುವಕರು ದೇಶದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಕೌಶಲ್ಯವನ್ನು ಬಳಸಿಕೊಳ್ಳಲು ಅವಕಾಶ ದೊರೆಯುತ್ತಿದೆ. 1,000 ಐಟಿಐಗಳ ಆಧುನೀಕರಣಕ್ಕಾಗಿ 60 ಸಾವಿರ ಕೋಟಿ ವೆಚ್ಚದ ಪ್ರಧಾನಮಂತ್ರಿ ಸೇತು ಯೋಜನೆಗೆ ಒತ್ತು ನೀಡಲಾಗಿದ್ದು, ಆಧುನಿಕ ತಾಂತ್ರಿಕ ತರಬೇತಿ ಸೌಲಭ್ಯಗಳನ್ನು ಕಲ್ಪಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ ದೇಶದ ವಿವಿಧ ಭಾಗಗಳಲ್ಲಿ ನಡೆದ ರೋಜ್‌ಗಾರ್ ಮೇಳದ ಅಂಗವಾಗಿ ಸುಮಾರು 51 ಸಾವಿರ ಅಭ್ಯರ್ಥಿಗಳಿಗೆ ಉದ್ಯೋಗ ನೇಮಕಾತಿ ಪತ್ರಗಳನ್ನು ವಿತರಿಸಲಾಗುತ್ತಿದೆ. ಇದು ಯುವಜನರಿಗೆ ಹೊಸ ಅವಕಾಶಗಳನ್ನು ಕಲ್ಪಿಸುವ ಮಹತ್ವದ ವೇದಿಕೆಯಾಗಿದೆ. 2014 ರಿಂದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತದಲ್ಲಿ ಆರ್ಥಿಕತೆ, ಮೂಲಸೌಕರ್ಯ, ಉದ್ಯೋಗ ಮತ್ತು ಜನಕಲ್ಯಾಣ ಕ್ಷೇತ್ರಗಳಲ್ಲಿ ಹಲವು ಬದಲಾವಣೆಗಳು ನಡೆದಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕಿ ಪುಷ್ಪಲತಾ ಉಪಸ್ಥಿತರಿದ್ದರು.

### ಸ್ವಂತ ಹಣದಲ್ಲೇ ಸಾಲ ಮನ್ನಾ ಸಾಧ್ಯ!

ಅದೂ ಆಗಬಹುದು ಎಂದು ಲೇವಡಿ ಮಾಡಿದರು.

ಇನ್ನು ಸಾಲಮನ್ನಾಗೆ ಮೋದಿ ಸಹಕಾರ ಬೇಕು ಎಂದ ಸಿಎಂ ಹೇಳಿಕೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ನಾನು ಎರಡು ಬಾರಿ ಸಾಲಮನ್ನಾ ಮಾಡಿದಾಗ ಮೋದಿ, ಮನಮೋಹನ್ ಸಿಂಗ್ ಅವರ ಬಳಿ ಹಣ ಕೊಡಿ ಅಂತ ಕೇಳಿದ್ನಾ? ನಮ್ಮ ತೆರಿಗೆ ಹಣದಿಂದ ಸಾಲಮನ್ನಾ ಮಾಡಿದ್ದೇನೆ. ಪೊಳ್ಳು ಘೋಷಣೆಗಳನ್ನ ಸಿಎಂ ಮೊದಲು ಬಿಡಲಿ. ಎಷ್ಟು ಕೆಲಸ ಆಗುತ್ತೋ ಅಷ್ಟು ಸಾಲ ಮಾಡಿ ಎಂದು ಒತ್ತಾಯಿಸಿದರು.

# ಯುಪಿಎ ಹೆಚ್ಚುವರಿ ತೆರಿಗೆಗೆ ಖಂಡನೆ

ಮೈಸೂರು: ಕೇಂದ್ರ ಬಿಜೆಪಿ ಸರ್ಕಾರ ಯುಪಿಐ ಅಲ್ಲಿನ ವರ್ಗಾವಣೆಗಳಿಗೆ ಹೆಚ್ಚುವರಿ ತೆರಿಗೆ ವಿಧಿಸಲು ಮುಂದಾಗಿರುವುದುದ ಬಡಜನರ ಆರ್ಥಿಕತೆ ಮೇಲೆ ದುಷ್ಪರಿಣಾಮ ಬೀರಲಿದೆ. ಕೇಂದ್ರದ ಈ ನಡೆ ಖಂಡನೀಯವಾಗಿದ್ದು, ಕೂಡಲೇ ಹೆಚ್ಚುವರಿ ತೆರಿಗೆ ವಾಪಾಸ್ ಪಡೆಯುವಂತೆ ಕಾಂಗ್ರೆಸ್ ಕಾರ್ಯಕರ್ತರು ಆಗ್ರಹಿಸಿದರು.

ಮೈಸೂರು ನಗರ ಕಾಂಗ್ರೆಸ್ ಸಮಿತಿಯಿಂದ ನಗರದ ಹಳೆ ನ್ಯಾಯಾಲಯದ ಎದುರಿನ ಗಾಂಧಿ ಪುತ್ಥಳಿ ಎದುರು ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ನಾನಾ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಕಾರ್ಯಕರ್ತರು ತೆರಿಗೆ ಇಳಿಸುವಂತೆ ಆಗ್ರಹಿಸಿದರು. ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್ ಮಾತನಾಡಿ, ಕೇಂದ್ರ ಬಿಜೆಪಿಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸರ್ಕಾರಿ ಜಾರಿಗೆ ತರಲು ಹೊರಟಿರುವ ಯುಪಿಎ ವರ್ಗಾವಣೆಯ ಮೇಲಿನ ಸುಂಕ ಬಡ, ಕೂಲಿ ಕಾರ್ಮಿಕರ ಹಣವನ್ನು ಲೂಟಿ ಮಾಡಲು ಹೊರಟಿರುವುದು ಕಾರ್ಮಿಕ ವಿರೋಧಿ ನೀತಿಯಾಗಿದೆ ಎಂದರು.

ಬಡ, ಮದ್ಯಮ ಮಂದಿ ಮೊಬೈಲ್ ಯುಪಿಐ ಮೂಲಕ ತನ್ನ ವ್ಯವಹಾರಗಳಿಂದ ಹಣ ವರ್ಗಾವಣೆ ಮಾಡುವ ಸಂದರ್ಭದಲ್ಲಿ 4000ಕ್ಕೂ ಅಧಿಕ ವ್ಯಾಪಾರ ವಹಿವಾಟು ನಡೆದರೆ ಶೇ.40ಕ್ಕಿಂತ ಅಧಿಕ ಸೆಸ್ಕ್ ರೂಪದಲ್ಲಿ ಹಣ ಕಡಿತ ಮಾಡಲು ಹೊರಟಿರುವುದು ಕೂಲಿ ಕಾರ್ಮಿಕರನ್ನು ವಂಚಿಸುವ ನೀಚ ಕೃತ್ಯವಾಗಿದೆ. ಕೇಂದ್ರ ಸರ್ಕಾರ ಯುವಜನರಿಕೆ ಉದ್ಯೋಗ ನೀಡಿಲ್ಲ. ವಿದೇಶದಲ್ಲಿರುವ ಕಪ್ಪುಹಣ ಸಹ ತರಲಿಲ್ಲ. ಇದಾವುದನ್ನು ಮಾಡದೇ ಕ್ಯಾಶ್ ಲೆಸ್ ಇಂಡಿಯಾ ಮಾಡುತ್ತೇವೆಂದು ಹೇಳಿ ಈಗ ತೆರಿಗೆ ರೂಪದಲ್ಲಿ ಬಡಜನರಿಂದಲೇ ಹಣ ಕಸಿಯಲ್ಲು ಹೊರಟಿದ್ದಾರೆ. ಇದನ್ನು ಈ ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದರು. ನಗರ ವಕ್ತಾರರಾದ ಟಿ.ಶ್ರೀನಿವಾಸ್, ರವಿನಂದನ್, ಬಿ.ಪಿ.ಕೇಶವ, ಬಾಬು, ಎಸ್.ಎ.ರಹೀಂ, ಕುಕ್ಕರಹಳ್ಳಿ ನಂಜುಂಡಸ್ವಾಮಿ, ಮಂಜುಶೆಟ್ಟಿ, ಮಹಮ್ಮದ್ ಜೌಫರ್, ಯೋಗೇಶ್, ರಾಜಶೇಖರ್ ಇನ್ನಿತರರು ಇದ್ದರು.



# ಗಜಪಡೆ ಪರಿಚಯಿಸಿದ ರಾಜವಂಶಸ್ಥೆ ತ್ರಿಷಿಕಾಕುಮಾರಿ

**ಮೈಸೂರು:** ಮಹಾರಾಣಿ ತ್ರಿಷಿಕಾ ಕುಮಾರಿ ಒಡೆಯರ್ ಅವರು ತಮ್ಮ ಸಂಬಂಧಿಕರು ಹಾಗೂ ಸ್ನೇಹಿತರಿಗೆ ದಸರಾ ಗಜಪಡೆಯನ್ನು ಪರಿಚಯ ಮಾಡಿಕೊಟ್ಟರು. ಕ್ಯಾಂಪ್ಗೆ ಆಗಮಿಸಿ ಅವರು, ದಸರಾ ಗಜಪಡೆ ಹಾಗೂ ಅರಮನೆಯ ಎರಡು ಹೆಣ್ಣಾನೆಗಳನ್ನು ಸ್ವತಃ ಪರಿಚಯ ಮಾಡಿಕೊಟ್ಟರು. ಇದೇ ವೇಳೆ ಎಲ್ಲ ಆನೆಗಳಿಗೂ ಬಾಳೆಹಣ್ಣು ನೀಡಿದರು.

ಗಜಪಡೆ ಅರಮನೆಗೆ ಆಗಮಿಸಿದ ದಿನದಿಂದ ದಸರಾ ಸಂಭ್ರಮ ಕಳೆಗಟ್ಟಿದೆ. ಪ್ರತಿದಿನ ನಡೆಯುವ ಆನೆಗಳ ತಾಲೀಮು ನೋಡಲು ಜನಸಾಗರವೇ ಹರಿದುಬರುತ್ತಿದೆ. ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಗಂಟೆಗಟ್ಟಲೇ ಕಾದು ಗಜಪಡೆಯನ್ನು ನೋಡಿ ಖುಷಿಪಡುತ್ತಿದ್ದಾರೆ. ದಸರಾ ಗಜಪಡೆಯು ಸದ್ಯ ಅರಮನೆಯ ಕೋಡಿ ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿ ವಾಸ್ತವ್ಯ ಹೂಡಿದ್ದು, ಈ ಆನೆಗಳನ್ನು ನೋಡಲು ಸಂಸದ ಯದುವೀರ್ ಒಡೆಯರ್, ರಾಜಮಾತೆ ಪ್ರಮೋದಾದೇವಿ ಒಡೆಯರ್ ಹಾಗೂ ಯದುವೀರ್ ಒಡೆಯರ್ ಅವರ ಪತ್ನಿ ತ್ರಿಷಿಕಾ ಕುಮಾರಿ ಒಡೆಯರ್ ಮಕ್ಕಳ ಸಹಿತ ಇಲ್ಲಿಗೆ ಭೇಟಿ ನೀಡುತ್ತಿರುತ್ತಾರೆ. ಅದರಂತೆ ಬೆಂಗಳೂರು ಹಾಗೂ ಇತರ ಕಡೆಯಿಂದ ಆಗಮಿಸಿದ್ದ ಸಂಬಂಧಿಕರು, ಸ್ನೇಹಿತೆಯರು ಹಾಗೂ ಮಕ್ಕಳನ್ನು ಗಜಪಡೆ ವಾಸ್ತವ್ಯ ಹೂಡಿರುವ ಶೆಡ್ಗೆ ಕರೆದುಕೊಂಡು ಬಂದ ತ್ರಿಷಿಕಾ ಒಡೆಯರ್ ಗಜಪಡೆಯನ್ನು ಸ್ವತಃ ಪರಿಚಯ ಮಾಡಿಕೊಟ್ಟರು. ಅಲ್ಲದೇ ಮಗನ ಜೊತೆ ಸೇರಿಕೊಂಡು ಆನೆಗಳಿಗೆ ಬಾಳೆಹಣ್ಣನ್ನು ತಿನ್ನಿಸಿದರು. ಇದೇ ವೇಳೆ ಮಾವುತರು ಹಾಗೂ ಕಾವಾಡಿಗಳನ್ನು ಮಾತನಾಡಿಸಿ, ಆನೆಗಳ ಆರೋಗ್ಯದ ಬಗ್ಗೆಯೂ ವಿಚಾರಿಸಿದರು.





# ಸೇವ್ ಹಿಂದೂ ದೇವಾಲಯ ಅಭಿಯಾನಕ್ಕೆ ಚಾಲನೆ

**ಮೈಸೂರು:** ಪ್ರಧಾನಮಂತ್ರಿ ನರೇಂದ್ರ ಮೋದಿ ಜನ್ಮದಿನಾಚರಣೆಯ ಅಂಗವಾಗಿ ನಡೆಯುತ್ತಿರುವ ಸೇವಾ ಸಂಕಲ್ಪ ಕಾರ್ಯಕ್ರಮದ ಭಾಗವಾಗಿ ಸೇವ್ ಹಿಂದೂ ದೇವಾಲಯದ ವಿಶೇಷ ಅಭಿಯಾನಕ್ಕೆ ಸಂಸದ ಯಧು ವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವಿನೂತನವಾಗಿ ಚಾಲನೆ ನೀಡಿದರು.

ಹಾನಿಗೊಳಗಾದ ಧಾರ್ಮಿಕ ವಿಗ್ರಹ ಹಾಗೂ ದೇವರ ಭಾವಚಿತ್ರಗಳನ್ನು ಗೌರವಯುತವಾಗಿ ಸಂಗ್ರಹಿಸಿ ನಿರ್ವಹಿಸುವ ವಿಶೇಷ ಉಪಕ್ರಮಕ್ಕೆ ಚಾಲನೆ ನೀಡಿದ ಅವರು, ಮನೆ ಹಾಗೂ ದೇವಾಲಯಗಳಲ್ಲಿ ಪೂಜೆಗೆ ಬಳಸಲಾಗುತ್ತಿದ್ದ ಹಾನಿಗೊಳಗಾದ, ಮುರಿದ, ಹಳೆಯ ಅಥವಾ ಇನ್ನು ಮುಂದೆ ಪೂಜಿಸಲು ಸಾಧ್ಯವಾಗದ ಧಾರ್ಮಿಕ ವಿಗ್ರಹಗಳು ಹಾಗೂ ದೇವರ ಭಾವಚಿತ್ರಗಳನ್ನು ಗೌರವಯುತವಾಗಿ ಸಂಗ್ರಹಿಸಿ, ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ವ್ಯವಸ್ಥೆ ಕಲ್ಪಿಸುವುದು ಈ ಉಪಕ್ರಮದ ಉದ್ದೇಶವಾಗಿದೆ. ಈ ಉಪಕ್ರಮದ ಅಂಗವಾಗಿ ಹಾನಿಗೊಳಗಾದ ಅಥವಾ ಅಗತ್ಯವಿಲ್ಲದ ಧಾರ್ಮಿಕ ವಿಗ್ರಹಗಳು ಮತ್ತು ಭಾವಚಿತ್ರಗಳನ್ನು ಸಂಗ್ರಹಿಸಲು ವಿಶೇಷವಾಗಿ ವಿನ್ಯಾಸಗೊಳಿಸಿದ ಸಂಗ್ರಹಣಾ ಪಂಜರಗಳನ್ನು ಅಳವಡಿಸಲಾಗಿದೆ. ಪವಿತ್ರ ಧಾರ್ಮಿಕ ವಸ್ತುಗಳನ್ನು ಸಾಮಾನ್ಯ ತ್ಯಾಜ್ಯದೊಂದಿಗೆ ಎಸೆಯದಂತೆ ಅಥವಾ ಸೂಕ್ತವಲ್ಲದ ಸ್ಥಳಗಳಲ್ಲಿ ಬಿಡದಂತೆ ನೋಡಿಕೊಳ್ಳುವುದು ಹಾಗೂ ಅವುಗಳನ್ನು ಗೌರವಯುತವಾಗಿ ಮತ್ತು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುವುದು ಇದರ ಉದ್ದೇಶವಾಗಿದೆ. ಮೈಸೂರಿನ ಅಗ್ರಹಾರ ಸರ್ಕಲ್‌ನ 101 ಗಣಪತಿ ದೇವಸ್ಥಾನದ ಸಮೀಪದಲ್ಲಿ ಈ ಉಪಕ್ರಮದ ಮೊದಲ ಸಂಗ್ರಹಣಾ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದರು.



ತಲೆತಲಾಂತರಗಳಿಂದ ನಮ್ಮ ದೇವಾಲಯಗಳು, ಸಂಪ್ರದಾಯಗಳು ಹಾಗೂ ಧಾರ್ಮಿಕ ಆಚರಣೆಗಳು ನಮ್ಮ ಸಾಂಸ್ಕೃತಿಕ ಅಸ್ಮಿತೆಯ ಅವಿಭಾಜ್ಯ ಅಂಗಗಳಾಗಿವೆ. ಒಂದು ವಿಗ್ರಹ ಅಥವಾ ಧಾರ್ಮಿಕ ಭಾವಚಿತ್ರ ಹಾನಿಗೊಳಗಾದಾಗ ಅಥವಾ ಅದನ್ನು ಇನ್ನು ಮುಂದೆ ಪೂಜಿಸಲು ಸಾಧ್ಯವಾಗದ ಸಂದರ್ಭದಲ್ಲಿ, ನಾವು ಅದನ್ನು ಪೂಜಿಸುವಾಗ ತೋರಿಸುವ ಅದೇ ಗೌರವದಿಂದ ಅದನ್ನು ನಿರ್ವಹಿಸುವುದು ಮುಖ್ಯವಾಗಿದೆ ಎಂದರು. ಸೇವ್ ಹಿಂದೂ ದೇವಾಲಯ ಸಂಸ್ಥೆ ಸಂಸ್ಥಾಪಕ ಎಂ.ಎಂ.ನಿಖಿಲೇಶ್ ಮಾತನಾಡಿದರು. ಕೆ.ಆರ್.ಮಂಡಲ ಅಧ್ಯಕ್ಷ ಗೋಪಾಲ್ ರಾಜ್ ಅರಸ್, ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ, ಸಂಸ್ಥೆಯ ಪದಾಧಿಕಾರಿಗಳಾದ ರಾಘವೇಂದ್ರ, ಸುನಿಲ್, ವೀರಭದ್ರ, ಬಾಲಚಂದ್ರ, ಪ್ರವೀಣ್ ಹಾಗೂ ನಾಗೇಂದ್ರ ಸೇರಿ ಇತರರು ಭಾಗವಹಿಸಿದ್ದರು.

ಮೊದಲ ಪುಟದಿಂದ

### ರೆಡ್ಡಿ ಹುಚ್ಚ, ಗಣಿಕಳ್ಳ

ನಾನು. ರಾಜಕೀಯ ಹೋರಾಟ ಮಾಡಿಕೊಂಡು ಬಂದಿರುವವನು. ಇವರಿಗೆಲ್ಲ ಉತ್ತರ ಕೊಡಲು ಹೋಗಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ವಾಗ್ದಾಳಿ ನಡೆಸಿದರು. ಕೆಪಿಸಿಸಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಹರಿಪ್ರಸಾದ್ ಹುಚ್ಚ' ಎಂಬ ಮಾಜಿ ಸಚಿವ ಜನಾರ್ದನ ರೆಡ್ಡಿ ಹೇಳಿಕೆಗೆ ಪ್ರತಿಕ್ರಿಯಿಸಿದರು. ಜನಾರ್ದನ ರೆಡ್ಡಿಗೆ ವಂದೇ ಮಾತರಂ 2 ಪ್ಯಾರಾನಾದ್ರೂ ಹಾಡೋಕೆ ಬರುತ್ತಾ ಕೇಳಿ ಎಂದು ತಿರುಗೇಟು ನೀಡಿದರು.

### ಮೊದಲು ಪರಿಹಾರ ನೀಡಿ

ಕುಡಿಯೋ ನೀರಿನ ಸಮಸ್ಯೆ ಸರ್ಕಾರ ಬಗೆಹರಿಸಿಲ್ಲ. ಸಿಎಂ ಅವರೇ ಬೆಳೆ ಬೆಳೆಯಬೇಡಿ ಅಂತ ಹೇಳಿದ್ದರು. ಈಗ ಆ ರೈತರಿಗೆ ಏನ್ ಮಾಡ್ತೀರಾ? ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

### ಎಲ್ಲರ ಧ್ವನಿ ಒಂದೇ

ಇದ್ದಾರೆ. ಕಸ್ತೂರಿ ರಂಗನ್ ವರದಿ ಜಾರಿ ಮಾಡಬಾರದು ಅಂತ ಎಲ್ಲರ ನಿಲುವು ಇದೆ. ನಮ್ಮ ಪಕ್ಷದ ನಿಲುವು ಇದೆ. ಒಂದು ಧ್ವನಿಯಾಗಿ ಈ ವಿಚಾರದಲ್ಲಿ ನಾವು ಹೋರಾಟ ಮಾಡಬೇಕು ಎಂದು ಕರೆ ನೀಡಿದರು.

### ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ

# ಮತಗಟ್ಟೆಗಳಲ್ಲಿ ವ್ಯವಸ್ಥಿತ ವಿಚಾರಣೆಗೆ ಸೂಚನೆ

ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಕರಡು ಪಟ್ಟಿಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ಹಕ್ಕು ಮತ್ತು ಆಕ್ಷೇಪಣೆಗಳ ಕುರಿತು ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ, ಮತಗಟ್ಟೆಗಳಲ್ಲಿ ಯಾವುದೇ ಗೊಂದಲಗಳಾಗದಂತೆ ವಿಚಾರಣಾ ಪ್ರಕ್ರಿಯೆಯನ್ನು ಅತ್ಯಂತ ವ್ಯವಸ್ಥಿತವಾಗಿ ನಡೆಸುವಂತೆ ಮತಗಟ್ಟೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು. ಎಸ್ಐಆರ್ (ಖಖಖ) ಪ್ರಕ್ರಿಯೆಯಲ್ಲಿ ಈಗಾಗಲೇ ಕರಡು ಮತದಾರರ ಪಟ್ಟಿ ಪ್ರಕಟಗೊಂಡಿದ್ದು, ಸೆಪ್ಟೆಂಬರ್ 8 ರಿಂದ 14ರವರೆಗೆ ಒಟ್ಟು 1981 ಹಕ್ಕು ಮತ್ತು ಆಕ್ಷೇಪಣೆಗಳು ಸಲ್ಲಿಕೆಯಾಗಿವೆ ಹಾಗೂ ಮತದಾರರಿಂದ ಇವುಗಳನ್ನು ಸ್ವೀಕರಿಸುವ ಕಾರ್ಯ ಪ್ರಗತಿಯಲ್ಲಿದೆ ಎಂದರು.

ವಿಚಾರಣಾ ಪ್ರಕ್ರಿಯೆಯ ಅಂಕಿ–ಅಂಶಗಳು ಹಾಗೂ ವಿಧಾನಸಭಾ ಕ್ಷೇತ್ರಗಳ ಸ್ಥಿತಿಗತಿ



ಹಕ್ಕು ಮತ್ತು ಆಕ್ಷೇಪಣೆ ಇತ್ಯರ್ಥಪಡಿಸಲು ವಿಚಾರಣೆಗೆ ಹಾಜರಾಗುವಂತೆ ಈವರೆಗೆ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 7469 ಮಂದಿಗೆ ನೋಟಿಸ್ ನೀಡಲಾಗಿದ್ದು, ಕೇವಲ 11 ಮಂದಿಗೆ ನೋಟಿಸ್ ತಲುಪಿಸಬೇಕಾಗಿದೆ. ಈ ಪೈಕಿ ಈಗಾಗಲೇ 4191 ಮತದಾರರ ವಿಚಾರಣೆ ನಡೆಸಲಾಗಿದ್ದು, 3278 ಮಂದಿಯ ವಿಚಾರಣೆ ಬಾಕಿಯಿದೆ. ಹನೂರು, ಕೊಳ್ಳೇಗಾಲ ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ವಿಚಾರಣೆ ಮುಗಿಯುವ ಹಂತದಲ್ಲಿದ್ದರೆ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ವಿಚಾರಣೆ ಬಾಕಿಯಿದೆ. ಮತದಾರರ ವಿಚಾರಣಾ ಕಾರ್ಯವನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳುವಂತೆ ಮತಗಟ್ಟೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವಿಚಾರಣೆ ವೇಳೆ ಮತಗಟ್ಟೆಗಳಲ್ಲಿ ನೂಕುನುಗ್ಗಲು ಉಂಟಾಗುತ್ತಿರುವ ದೂರುಗಳ ಹಿನ್ನೆಲೆಯಲ್ಲಿ, ತಾಲೂಕು ಮಟ್ಟದಲ್ಲಿ ಸಭೆ ನಡೆಸಿ ವಿಚಾರಣೆಯನ್ನು ವ್ಯವಸ್ಥಿತವಾಗಿ ಹಾಗೂ ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಪಟ್ಟಿಯಲ್ಲಿನ ಹಕ್ಕು, ಆಕ್ಷೇಪಣೆಗಳ ವಿವರಗಳನ್ನು ರಾಜಕೀಯ ಪಕ್ಷಗಳ ಪ್ರತಿನಿಧಿಗಳು ತಾವು ನಿಯೋಜಿಸಿರುವ ಬಿಎಲ್‌ಒ–2 ಗಳ ಮೂಲಕ ಪರಿಶೀಲಿಸಬೇಕು. 18 ವರ್ಷ ತುಂಬಿದ ಹೊಸ ಮತದಾರರನ್ನು 'ಮಿಂಚಿನ ನೋಂದಣಿ' ಮೂಲಕ ಪಟ್ಟಿಗೆ ಸೇರ್ಪಡೆಗೊಳಿಸಲು ಜಿಲ್ಲಾಡಳಿತಕ್ಕೆ ಹಾಗೂ ಮತಗಟ್ಟೆ ಅಧಿಕಾರಿಗಳಿಗೆ ಸಹಕಾರ ನೀಡಬೇಕು. ಯಾವುದೇ ಅರ್ಹ ಮತದಾರರು ವಂಚಿತರಾಗದಂತೆ ಎಚ್ಚರ ವಹಿಸಲಾಗುತ್ತಿದ್ದು, ಯುವ ಮತದಾರರ ಸೇರ್ಪಡೆಗಾಗಿ ಜಿಲ್ಲೆಯ ಎಲ್ಲಾ ಕಾಲೇಜು ಪ್ರಾಂಶುಪಾಲರಿಗೆ ಮಾಹಿತಿ ನೀಡಿ ಜಾಗೃತಿ ಮೂಡಿಸಲಾಗುತ್ತಿದೆ. ಅಂತಿಮ ಮತದಾರರ ಪಟ್ಟಿ ಪ್ರಕಟವಾಗುವವರೆಗೆ ಎಲ್ಲಾ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಸಂಪೂರ್ಣ ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ಕೋರಿದರು. ಈ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಎಸ್. ಬಾಲಸುಬ್ರಹ್ಮಣ್ಯ, ಎಚ್.ಎಸ್. ತೋಂಟದಾರ್ಯಸ್ವಾಮಿ, ಎಂ. ಚಿಕ್ಕಮಹದೇವು, ಎಸ್. ರಾಮಚಂದ್ರ, ಆರ್. ಚೇತನ್ ಕುಮಾರ್, ಎನ್. ರವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ತಾಲ್ಲೂಕು ಕೃಷಿ, ಗ್ರಾಮೀಣ ಅಭಿವೃದ್ಧಿ ಬ್ಯಾಂಕ್: ಶೇ 60.21 ಸಾಲ ವಸೂಲಿ




ರಾಮನಗರ: ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆದ ರೈತರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಶೇ.3% ರ ಬಡ್ಡಿದರದಲ್ಲಿ ಸಾಲ ಪಡೆದ ರೈತರು ನಿಗಧಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡಿದರೆ ಸರ್ಕಾರದ ಬಡ್ಡಿ ರಿಯಾಯಿತಿ ಸಿಗಲಿದೆ ಎಂದು ರಾಮನಗರ ತಾಲ್ಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಯು.ನರಸಿಂಹಯ್ಯ ತಿಳಿಸಿದರು.

ರಾಮನಗರದ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆವರಣದಲ್ಲಿ ಶನಿವಾರ ನಡೆದ 2025?26 ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯಲ್ಲಿ ಅಧ್ಯ ಕ್ಷತೆ ವಹಿಸಿ ಮಾತನಾಡಿದರು. ಬ್ಯಾಂಕು ರೈತರಿಗೆ ಸಾಲ ಸೌಲಭ್ಯ ನೀಡಿ ರೈತರ ಆರ್ಥಿಕ ಅಭಿವೃದ್ಧಿಗೆ ಶ್ರಮಿಸುತ್ತಾ ಬರುತ್ತಿದೆ. ಪಡೆದ ಸಾಲವನ್ನು ನಿಗಧಿತ ಅವಧಿಯಲ್ಲಿ ಮರು ಪಾವತಿ ಮಾಡಿದರೆ ಮಾತ್ರ ಸರ್ಕಾರದ ನೀತಿಯಂತೆ ಬಡ್ಡಿ ರಿಯಾಯಿತಿ ಅನ್ವಯವಾಗುತ್ತದೆ. ತಪ್ಪಿದರೆ ಶೇ. 12 ಬಡ್ಡಿದರ ಪಾವತಿಸಬೇಕಾಗುತ್ತದೆ ಎಂದರು.

ಹೆಚ್ಚುವರಿ ಬಡ್ಡಿ ದರ ಪಾವತಿ ಮಾಡುವುದರಿಂದ ರೈತರಿಗೆ ಹೆಚ್ಚಿನ ಆರ್ಥಿಕ ಹೊರೆ ಬೀಳುತ್ತದೆ. ಹೀಗಾಗಿ ನಿಗಧಿತ ಅವಧಿಯಲ್ಲಿ ಸಾಲ ತೀರಿಸಿ ಎಂದರು. ಮುಂದಿನ ದಿನಗಳಲ್ಲಿ ಬ್ಯಾಂಕಿನಲ್ಲಿ ಚಿನ್ನ ಅಡಮಾನ ಸಾಲ ಯೋಜನೆ ತರಲು ಆಡಳಿತ ಮಂಡಳಿ ಚಿಂತನೆ ಮಾಡಿದೆ ಎಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಬ್ಯಾಂಕು 63.45 ಲಕ್ಷ ಸಾಲ ನೀಡಿದ್ದು 2 ಕೋಟಿ 58 ಲಕ್ಷ ಸಾಲ ಬಾಕಿ ಇದೆ. 89 ಲಕ್ಷ 91 ಸಾವಿರ ವಸೂಲಿಯಾಗಿದ್ದು ಬ್ಯಾಂಕಿನಲ್ಲಿ 1067 ಜನ ಸದಸ್ಯರಿದ್ದಾರೆ. ಬ್ಯಾಂಕು ರೈತ ಸ್ನೇಹಿಯಾಗಿ ಜನಸ್ನೇಯಿಯಾಗಿ ರೈತರ ಉತ್ತಮ ಸಹಕಾರದಿಂದ ನಡೆದು ಬರುತ್ತಿದೆ. ಹಲವಾರು ಯೋಜನೆಗಳ ಮೂಲಕ ರೈತ ಸಮುದಾಯದ ಏಳಿಗೆಗೆ ಕೃಷಿ ಮತ್ತು ಕೃಷಿಯೇತರ ಸಾಲಗಳನ್ನು ವಿತರಿಸುತ್ತಾ ಬಂದಿದ್ದು ಸಾವಿರಾರು ಕೃಷಿಕರಿಗೆ ಬ್ಯಾಂಕು ನೆರವಾಗಿ ರೈತರಿಗಾಗಿ ಶ್ರಮಿಸುತ್ತಿದೆ.

ಶೇ. 60.21 ರಷ್ಟು ಸಾಲವನ್ನು ಆಡಳಿತ ಮಂಡಳಿ ಮತ್ತು ಬ್ಯಾಂಕಿನ ನೌಕರ ವರ್ಗದವರ ಸಹಕಾರದಿಂದ ವಸೂಲು ಮಾಡಲಾಗಿದೆ ಎಂದರು. ಬ್ಯಾಂಕಿನಲ್ಲಿ ಇ ಸ್ಟಾಂಪ್ ಯೋಜನೆ, ಪಹಣಿ ನೀಡುವ ವ್ಯವಹಾರ ನಡೆಸಲಾಗುತ್ತಿದೆ. ಸದಸ್ಯರಿಗೆ ಯಶಸ್ವಿನಿ ಯೋಜನೆ ಮಾಡಲಾಗಿದೆ. ಬ್ಯಾಂಕಿನಿಂದ ಸಾಲ ಸೌಲಭ್ಯ ಪಡೆದ ರೈತರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಬ್ಯಾಂಕಿನ ಪ್ರಭಾರ ವ್ಯವಸ್ಥಾಪಕ ಎಂ.ಬಿ. ರಾಜೇಶ್ ಬ್ಯಾಂಕಿನ ಸದಸ್ಯರ ಪಟ್ಟಿ, ನೀಡಿರುವ ಸಾಲ, ಜಮಾ ಖರ್ಚು, ಲಾಭ ನಷ್ಟ ಮತ್ತಿತರ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದು ವರದಿ ಓದಿದರು. ಬ್ಯಾಂಕಿನ ಆಡಳಿತ ಮಂಡಳಿ ಉಪಾಧ್ಯಕ್ಷೆ ವಿನೋದ ಕೆ. ಪಟೇಲ್, ನಿರ್ದೇಶಕರುಗಳಾದ ಎಂ.ಆರ್. ಶಿವಕುಮಾರಸ್ವಾಮಿ, ಆರ್. ಮಲ್ಲೇಶ್, ಜೆ.ಬಿ. ಪುಟ್ಟಮಾರೇಗೌಡ, ಎಲ್.ಎಂ. ಸಂತೋಷ್, ಹೆಚ್.ಸಿ. ಶಿವಣ್ಣ, ಎಸ್.ಬಿ. ರಾಜಣ್ಣ, ಚಂದ್ರೇಗೌಡ, ಗೋವಿಂದನಾಯ್ಕ, ವ್ಯವಸ್ಥಾಪಕ ಎಂ.ಬಿ. ರಾಜೇಶ್, ಸಹಾಯಕರಾದ ಸಂತೋಷ್‌ಕುಮಾರ್, ಎಸ್. ಪ್ರೇಮಲತಾ ಇದ್ದರು.

### ಪಿಗ್ಮಿ ಸಂಗ್ರಹ ವ್ಯವಸ್ಥೆಗೆ ಸದಸ್ಯರ ಆಗ್ರಹ

ಸಭೆಯಲ್ಲಿ ಕೆಂಚನಕುಪ್ಪೆ ಚಂದ್ರಪ್ಪ ಮಾತನಾಡಿ ಬ್ಯಾಂಕಿನಿಂದ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಚಿನ್ನದ ಅಡಮಾನ ಸಾಲ ವ್ಯವಸ್ಥೆ ಮಾಡಿ ಎಂದರೆ ಜಾಲಮಂಗಲ ರೈತ ಶಿವರಾಜು ಬ್ಯಾಂಕು ಅಭಿವೃದ್ಧಿ ಹೊಂದಲು ಪಿಗ್ಮಿ ಹಣ ಕಲೆಕ್ಟ್ ಮಾಡಿ ಎಂದರು. ಮತ್ತೊಬ್ಬ ರೈತ ಕೆಂಚನಕುಪ್ಪೆ ರಾಮಕೃಷ್ಣಯ್ಯ ಮಾತನಾಡಿ 7 ಎಕರೆ ಜಮೀನಿರುವ ರೈತರಿಗೆ ಟ್ರಾಕ್ಟರ್ ಸಾಲ ನೀಡುತ್ತೀರಿ ಅದನ್ನು ಎರಡು ಎಕರೆ ಜಮೀನಿರುವ ರೈತರಿಗೂ ವಿಸ್ತರಿಸಿ ಎಂದು ಪ್ರಶ್ನೆ ಕೇಳಿದರು. ರೈತ ಅವ್ವೇರಹಳ್ಳಿ ಪರಮೇಶ್ ಬ್ಯಾಂಕು 58 ಲಕ್ಷ ನಷ್ಟದಲ್ಲಿದೆ ಎನ್ನುತ್ತೀರಿ ನಷ್ಟ ಸರಿದೂಗಿಸಲು ಯಾವ ಮಾನದಂಡ ಆಡಳಿತ ಮಂಡಳಿ ನಡೆಸಿದೆ ಎಂದು ಸಭೆಯಲ್ಲಿ ಪ್ರಶ್ನೆ ಕೇಳಿದರು. ರೈತರ ಪ್ರಶ್ನೆಗಳಿಗೆ ಅಧ್ಯಕ್ಷ ಮತ್ತು ಆಡಳಿತ ಮಂಡಳಿ ನಿರ್ದೇಶಕರು ರೈತರ ಪ್ರಶ್ನೆಗೆ ಸೂಕ್ತ ಉತ್ತರ ನೀಡಿದರು.

## ಏಕಮುಖ ರಾಜಧನ ಸಂಗ್ರಹಣ ವ್ಯವಸ್ಥೆ ಜಾರಿಗೆ ಸೋಮಶೇಖರ್ ಆಗ್ರಹ



ಚಾಮರಾಜನಗರ: ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಎರಡು ಕಡೆ ರಾಜಧನ ಸಂಗ್ರಹ ಕೈ ಬಿಡುವುದು, ಇಲಾಖೆಯ ನಿಯಮಗಳನ್ನು ಬದಲಿಸುವುದು, ಏಕಮುಖ ರಾಜಧನ ಸಂಗ್ರಹಣ ವ್ಯವಸ್ಥೆ ಜಾರಿ ಮಾಡಬೇಕು ಎಂದು ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟದ ರಾಜ್ಯ ಸಹ ಕಾರ್ಯದರ್ಶಿ ಸೋಮಶೇಖರ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಇಮ್ಮಡಿ ಸಂಗ್ರಹ ತಕ್ಷಣವೇ ರದ್ದುಪಡಿಸಬೇಕು.ಕಾನೂನುಬಾಹಿರ ಇಮ್ಮಡಿ ಸಂಗ್ರಹಣೆ , ರಾಜ್ಯಸರ್ಕಾರವು ತೀವ್ರ ವಿರೋಧದ ನಡುವೆಯೂ ಇತರ ಸರ್ಕಾರಿ ಇಲಾಖೆಗಳ ಮುಖಾಂತರ ರಾಜಧನ ಕಡಿತ ಮಾಡುತ್ತಿದ್ದು, ಅದೇ ಸಮಯದಲ್ಲಿ ಕಲ್ಲುಗಣಿ ಮತ್ತು ಕ್ರಷರ್ ಮಾಲೀಕರಿಂದಲೂ ಪ್ರತ್ಯೇಕವಾಗಿ ರಾಜಧನವನ್ನು ಸಂಗ್ರಹಿಸುತ್ತಿದೆ. ಒಂದೇ ವಸ್ತುವಿಗೆ ಎರಡು ಬಾರಿ ರಾಜಧನ ವಸೂಲಿ ಮಾಡುತ್ತಿರುವುದು ಸಂಪೂರ್ಣ ಕಾನೂನುಬಾಹಿರವಾಗಿದೆ ಎಂದರು.

ಕರ್ನಾಟಕ ರಾಜ್ಯ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟದ ಅನಿರ್ದಿಷ್ಟಾವಧಿ ಮುಷ್ಕರ ಬೆಂಬಲಿಸಿ ಜಿಲ್ಲೆಯಲ್ಲಿರುವ ಕ್ವಾರಿ ಹಾಗೂ ಕ್ರಷರ್‌ಗಳು ಶುಕ್ರವಾರ ಸ್ಥಗಿತಗೊಂಡಿವೆ.ತಮ್ಮ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಒಕ್ಕೂಟವು ರಾಜ್ಯದಾದ್ಯಂತ ಕಲ್ಲು ಕ್ವಾರಿ, ಜಲ್ಲಿ ಕ್ರಷರ್ ಹಾಗೂ ಎಂ?ಸ್ಯಾಂಡ್ ಘಟಕಗಳನ್ನು ಸ್ಥಗಿತಗೊಳಿಸುವಂತೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಎಲ್ಲ ಕಡೆ ಸ್ಥಗಿತಗೊಂಡಿದೆ.

ಜಿಲ್ಲೆಯಾದ್ಯಂತ ಜಲ್ಲಿ ಕ್ರಷರ್, ಎಂ?ಸ್ಯಾಂಡ್ ಘಟಕಗಳು ಹಾಗೂ ಕ್ವಾರಿಗಳ ಎಲ್ಲಾ ಚಟುವಟಿಕೆ ಸ್ಥಗಿತಗೊಳಿಸಲಾಗಿದೆ. ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಅಗತ್ಯವಿರುವ ಸಾಮಗ್ರಿ ಪೂರೈಕೆ ಸಹ ನಿಲ್ಲಿಸಲಾಗಿದೆ'ಎಂದು ತಿಳಿಸಿದರು.

ಎರಡು ಕಡೆ ರಾಜಧನ ವಸೂಲಿ ಮಾಡುವುದನ್ನು ಕೂಡಲೇ ಕೈ ಬಿಡಬೇಕು. ಇಲ್ಲದಿದ್ದರೆ, ಕೋಟ್ಯಂತರ ರೂಪಾಯಿ ಬಂಡವಾಳ ಹಾಕಿದವರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಹಾಗಾಗಿ, ಸರ್ಕಾರ ನಮ್ಮ ಬೇಡಿಕೆ ಈಡೇರಿಸಬೇಕು' ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಚಾಮರಾಜನಗರ ಜಿಲ್ಲಾ ಗಣಿ ಹಾಗೂ ಸ್ಟೋನ್ ಕ್ರಷರ್ ಮಾಲೀಕರ ಅಸೋಸಿಯೇಷನ್ ಜಿಲ್ಲಾಧ್ಯಕ್ಷ ಉಮೇಶ್ ಎಸ್ ಪಿಕೆ, ಜಿಲ್ಲಾ ಕಾರ್ಯಾಧ್ಯಕ್ಷ ಮಧುಕುಮಾರ್, ಉಪಾಧ್ಯಕ್ಷ ಸೈಯದ್ ರಫೀ,ಖಜಾಂಚಿ ಮುರುಗೇಶ್, ಜಿಲ್ಲಾ ಕಾರ್ಯದರ್ಶಿ ದಿನೇಶ್, ಟಿಪಿ.ನಾಗರಾಜು ಇತರರು ಹಾಜರಿದ್ದರು.

**ಗುಂಡ್ಲುಪೇಟೆಯಲ್ಲಿ : ಅಧಿಕಾರಿಗಳ ಎದುರು ಸಮಸ್ಯೆಗಳ ಸುರಿಮಳೆ**

# 'ಪ್ರಜಾಸೇವೆ ಆಂದೋಲನ'ಕ್ಕೆ ಚಾಲನೆ

## ಜನರ ಮನೆಬಾಗಿಲಿಗೆ ಆಡಳಿತ ಮತ್ತು ಉಪಸ್ಥಿತರಿದ್ದ ಗಣ್ಯರು



ಗುಂಡ್ಲುಪೇಟೆ: ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಸ್ಪಂದಿಸಿ, ಆಡಳಿತವನ್ನು ಜನರ ಮನೆಬಾಗಿಲಿಗೆ ಕೊಂಡೊಯ್ಯುವ ಉದ್ದೇಶದಿಂದ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯಿತಿ ವತಿಯಿಂದ ಆಯೋಜಿಸಿರುವ 'ಪ್ರಜಾಸೇವೆ ಆಂದೋಲನ'ದ ಎರಡನೇ ಸಭೆಗೆ ಪಟ್ಟಣದ ಗುರು ಭವನದಲ್ಲಿ ಚಾಲನೆ ನೀಡಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್, ಜಿಲ್ಲಾಧಿಕಾರಿ ಶ್ರೀ ರೂಪ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಎಡಿಸಿ ಜವರೇಗೌಡ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

### ಬರ ನಿರ್ವಹಣೆಗೆ 25 ಕೋಟಿ ಬಿಡುಗಡೆ ಹಾಗೂ ಮೇವಿನ ಕಿಟ್ ವಿತರಣೆ

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಚಿವ ಪುಟ್ಟರಂಗಶೆಟ್ಟಿ, ಜಿಲ್ಲೆಯ ಐದು ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ಕುಡಿಯುವ ನೀರು ಹಾಗೂ ಮೇವಿನ ಸಮಸ್ಯೆ ಎದುರಿಸಲು ?25 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು. ಹೈನುಗಾರಿಕೆ ಮಾಡುತ್ತಿರುವ ರೈತರಿಗೆ ಈಗಾಗಲೇ 25 ಸಾವಿರ ಮೇವಿನ ಕಿಟ್ಗಳನ್ನು ವಿತರಿಸಲಾಗುತ್ತಿದೆ ಹಾಗೂ ಅಗತ್ಯ ಹೆಚ್ಚಾದರೆ ಮತ್ತಷ್ಟು 25 ಸಾವಿರ ಕಿಟ್ಗಳನ್ನು ನೀಡಲು ಸೂಚಿಸಲಾಗಿದೆ ಎಂದ ಅವರು, ಫಲಾನುಭವಿ ರೈತರಿಗೆ ಸಾಂಕೇತಿಕವಾಗಿ ಮೇವಿನ ಕಿಟ್ ಹಾಗೂ ಮೇವಿನ ಬೀಜಗಳನ್ನು ವಿತರಿಸಿದರು. ಜೊತೆಗೆ, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಅಗತ್ಯ ಹಣ ಬಿಡುಗಡೆ ಮಾಡುವುದಾಗಿಯೂ ಅವರು ಭರವಸೆ ನೀಡಿದರು.

### ಅಧಿಕಾರಿಗಳ ಎದುರು ಸಾರ್ವಜನಿಕರ ಸಮಸ್ಯೆಗಳ ಸರಮಾಲೆ

ಪ್ರಜಾಸೇವೆ ಸಭೆಯಲ್ಲಿ ತಾಲೂಕಿನ ವಿವಿಧ ಗ್ರಾಮಗಳು ಹಾಗೂ ಪಟ್ಟಣದ ಜನರು ತಮ್ಮ ಸಮಸ್ಯೆಗಳನ್ನು ಹೊತ್ತುಕೊಂಡು ಅಧಿಕಾರಿಗಳು ಹಾಗೂ ಸಚಿವರ ಮುಂದೆ ಸರತಿ ಸಾಲಿನಲ್ಲಿ ನಿಂತು ಅಹವಾಲು ಸಲ್ಲಿಸಿದರು. ಬಸ್ ಸೌಲಭ್ಯ, ಖಾತೆ ಅದಲುಬದಲು, ಪೌತಿ ಖಾತೆ, ಮೇವು, ಕೆರೆಗಳಿಗೆ ನೀರು, ಚರಂಡಿ ದುರಸ್ತಿ, ಕೆರೆ ಒತ್ತುವರಿ ತೆರವು, ಕುಡಿಯುವ ನೀರು, ರಸ್ತೆ ಅಭಿವೃದ್ಧಿ, ಮನೆ ಬಿಲ್, ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಹಾಗೂ ಅರಣ್ಯ ಇಲಾಖೆಯಿಂದ ಪರಿಹಾರ ಸೇರಿದಂತೆ ಹಲವು ಸಮಸ್ಯೆಗಳು ಸಭೆಯಲ್ಲಿ ಪ್ರಸ್ತಾಪವಾದವು. ಕಂದೇಗಾಲ ಗ್ರಾಮದಲ್ಲಿ ಚರಂಡಿಗೆ ಹೂಳು ತೆಗೆಯದಿರುವುದು, ತಾಲೂಕಿನ ಹಲವು ಕೆರೆಗಳು ಒತ್ತುವರಿಯಾಗಿರುವುದು ಹಾಗೂ ಕೆಲವು ಕೆರೆಗಳ ದಾಖಲೆಗಳೇ ಲಭ್ಯವಿಲ್ಲದಿರುವ ಬಗ್ಗೆ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು. ಪಂಜನಹಳ್ಳಿ ಗ್ರಾಮಸ್ಥರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದರು. ಕಗ್ಗಳ ಗ್ರಾಮದ ಮಹಿಳೆಯೊಬ್ಬರು ಹತ್ತು ತಿಂಗಳಾದರೂ ಖಾತೆ ಮಾಡಿಕೊಟ್ಟಿಲ್ಲ ಎಂದು ಅಹವಾಲು ಸಲ್ಲಿಸಿದರೆ, ರಸ್ತೆ ಅಭಿವೃದ್ಧಿ, ಮಣ್ಣು ಹಾಗೂ ಗ್ರಾವೆಲ್ ಹಾಕುವುದು ಮತ್ತು ಮನೆ ಬಿಲ್ ಬಾರದಿರುವ ಬಗ್ಗೆಯೂ ಸಾರ್ವಜನಿಕರಿಂದ ದೂರುಗಳು ಕೇಳಿಬಂದವು.

### ತಿಂಗಳಿಗೆ ಎರಡು ಬಾರಿ ಪ್ರಜಾಸೇವೆ ಸಭೆ

ಮುಂದಿನ ದಿನಗಳಲ್ಲಿ ಪ್ರತಿ ತಿಂಗಳ ಮೊದಲ ಹಾಗೂ ಮೂರನೇ ಶನಿವಾರ ಜಿಲ್ಲಾ ಮಟ್ಟದ ಪ್ರಜಾಸೇವೆ ಸಭೆ ನಡೆಸಲಾಗುವುದು ಎಂದು ಸಚಿವ ಪುಟ್ಟರಂಗಶೆಟ್ಟಿ ತಿಳಿಸಿದರು. ಸಾರ್ವಜನಿಕರು ತಮ್ಮ ಸಮಸ್ಯೆಗಳಿಗಾಗಿ ಕಚೇರಿಗಳಿಗೆ ಅಲೆದಾಡುವ ಅಗತ್ಯವಿಲ್ಲ, ಪ್ರಜಾಸೇವೆ ಸಭೆಗೆ ಆಗಮಿಸಿ ಅಹವಾಲು ಸಲ್ಲಿಸುವ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಅವರು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು, ರೈತ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

**ವನ್ಯಜೀವಿ ದಾಳಿ, ಮೂಲಸೌಕರ್ಯ ಕೊರತೆ**

### ರೈತರ ವಾಗ್ವಾದ

ಶಿವಪುರ ಗ್ರಾಮದ ರೈತರೊಬ್ಬರು ಮನೆ ಸಮೀಪಕ್ಕೆ ಬಂದ ಚಿರತೆ ತಮ್ಮ ಜಾನುವಾರುಗಳನ್ನು ತಿಂದು ಹಾಕಿದ್ದು, ಒಂದು ವರ್ಷ ಕಳೆದರೂ ಅರಣ್ಯ ಇಲಾಖೆ ಪರಿಹಾರ ನೀಡಿಲ್ಲ ಎಂದು ಸಚಿವರ ಮುಂದೆ ಅಳಲು ತೋಡಿಕೊಂಡರು. ಇದರೊಂದಿಗೆ, ತೆರಕಣಾಂಬಿ ಕಾಲೇಜಿಗೆ ಸಮರ್ಪಕ ರಸ್ತೆ ಇಲ್ಲದಿರುವುದು ಹಾಗೂ ಉನ್ನತ ದರ್ಜೆಗೆ ಏರಿಸಿರುವ ತಾಲೂಕು ಆಸ್ಪತ್ರೆಗೆ ಅಗತ್ಯ ಸೌಲಭ್ಯಗಳು ಇನ್ನೂ ದೊರೆಯುತ್ತಿಲ್ಲ ಎಂಬ ದೂರುಗಳೂ ಸಭೆಯಲ್ಲಿ ಕೇಳಿಬಂದವು. ಕೆರೆಗಳಿಗೆ ನೀರು ಹರಿಸುವ ವಿಚಾರ ಸಭೆಯಲ್ಲಿ ಕೆಲಕಾಲ ವಾಗ್ವಾದಕ್ಕೆ ಕಾರಣವಾಯಿತು. ರೈತ ಮುಖಂಡ ರಾದ ನಾಗರಾಜು ಹಾಗೂ ಸಂಪತ್ತು ಕುಂದಕೆರೆ ಅವರು, ನಮ್ಮ ತಾಲೂಕಿನ ಕೆರೆಗಳಿಗೆ ನೀರು ಬಿಡುತ್ತಿಲ್ಲ, ಪ್ರತಿವರ್ಷ ನಿಮ್ಮ ತಾಲೂಕಿನ ಕೆರೆಗಳಿಗೆ ಮಾತ್ರ ನೀರು ತುಂಬಿಸಲಾಗುತ್ತಿದೆ, ನಮ್ಮ ತಾಲೂಕಿನ ಕೆರೆಗಳಿಗೂ ನೀರು ಹರಿಸಬೇಕು ಎಂದು ಒತ್ತಾಯಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಪುಟ್ಟರಂಗಶೆಟ್ಟಿ, ಪೈಪ್ಲೈನ್ ಕಾಮಗಾರಿ ಪೂರ್ಣಗೊಂಡ ಬಳಿಕ ನೀರು ಬಿಡಲಾಗುವುದು, ಸದ್ಯ ನೀರು ಬಿಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿ ಸಿದರು. ಇದರಿಂದ ಅಸಮಾಧಾನಗೊಂಡ ರೈತ ಸಂಘದ ಮುಖಂಡರು, ನೀವು ಇಡೀ ಜಿಲ್ಲೆಯ ಉಸ್ತುವಾರಿ ಸಚಿವರು, ನಮ್ಮ ತಾಲೂಕಿನ ಜನರ ಸಮಸ್ಯೆಯನ್ನೂ ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

# ಎಚ್.ವಿ.ರಾಜೀವ್ ಹುಟ್ಟಹಬ್ಬ: ಆರೋಗ್ಯ ಶಿಬಿರ ಯಶಸ್ವಿ




ಮೈಸೂರು: ಕೆಪಿಸಿಸಿ ಸದಸ್ಯ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಅವರ ಹುಟ್ಟಹಬ್ಬದ ಅಂಗವಾಗಿ ಬುಧವಾರ ಆಯೋಜಿಸಿದ್ದ ಆರೋಗ್ಯ ಶಿಬಿರದಲ್ಲಿ ಸಾವಿರಾರು ಜನರು ಭಾಗವಹಿಸಿ ಉಪಯೋಗ ಪಡೆದುಕೊಂಡರು.

ವಿದ್ಯಾರಣ್ಯಪುರಂ ಭೂತಾಳೆ ಮೈದಾನದಲ್ಲಿ ಆಯೋಜಿಸಿದ್ದ ಆರೋಗ್ಯ ಶಿಬಿರವು ಬೆಳಗ್ಗೆ 9.30ರಿಂದ ಮಧ್ಯಾಹ್ನ 3.30ರವರೆಗೂ ನಡೆಯಿತು. ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಬಡಾವಣೆಗಳಿಂದ ಕುಟುಂಬ ಸಮೇತ ಆಗಮಿಸಿದ್ದ ಸಾವಿರಾರು ಜನರು, ಸರತಿ ಸಾಲಿನಲ್ಲಿ ನಿಂತು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಮಳಿಗೆಯಲ್ಲಿ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳಲು ಜನರು ಮುಗಿಬಿದ್ದರು. ಭಾರತ್ ಕ್ಯಾನ್ಸರ್ ಆಸ್ಪತ್ರೆ, ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ, ಜೆ.ಎಸ್.ಎಸ್. ದಂತ ವೈದ್ಯಕೀಯ ಆಸ್ಪತ್ರೆ, ಕೆ.ಆರ್. ಆಸ್ಪತ್ರೆ ಸೇರಿದಂತೆ ಹತ್ತಾರು ಆಸ್ಪತ್ರೆಗಳ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿ ಪ್ರತ್ಯೇಕ ಮಳಿಗೆಗಳಲ್ಲಿ ಪರೀಕ್ಷೆಗಳನ್ನು ನಡೆಸಿ ಆರೋಗ್ಯ ಸಲಹೆ ನೀಡಿದರು.

**ಅರ್ಥಪೂರ್ಣ ಆಚರಣೆ:** ಸಭಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಅಂತಾರಾಷ್ಟ್ರೀಯ ಕ್ರೀಡಾಪಟು ಡಾ.ಕೆ.ಎಸ್.ರಾಜಣ್ಣ, ಬಡ, ಮಧ್ಯಮ ವರ್ಗದ ಜನರಿಗೆ ಆರೋಗ್ಯ ಸೌಲಭ್ಯ ಪಡೆದುಕೊಳ್ಳುವುದು ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ದುಬಾರಿಯಾಗಿದೆ. ಹೀಗಾಗಿ ಹುಟ್ಟಹಬ್ಬ ಕ್ಷಣಿಕ ಸಂತೋಷ ಆಗಬಾರದು. ಜನರಿಗೆ ಅನುಕೂಲ ಆಗುವ ರೀತಿಯಲ್ಲಿ ಆಚರಣೆ ಆಗಬೇಕೆಂದು ಉದ್ದೇಶದಿಂದ ಆರೋಗ್ಯ ಶಿಬಿರ ಆಯೋಜಿಸಿರುವ ಎಚ್.ವಿ.ರಾಜೀವ್ ಮತ್ತು ಅವರ ಸ್ನೇಹ ಬಳಗದ ಕಾರ್ಯ ಅರ್ಥಪೂರ್ಣವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವೇಳೆ ಕೆ.ಆರ್. ಆಸ್ಪತ್ರೆಗೆ 10 ವೀಲ್ ಚೇರ್‌ಗಳು ಹಾಗೂ 2 ಬ್ಯಾಟರಿ ಆಪರೇಟೆಡ್ ವೀಲ್ ಚೇರ್‌ಗಳನ್ನು ವಿತರಣೆ ಮಾಡಲಾಯಿತು. ಆಯ್ದ 20 ಬೀದಿ ಬದಿ ವ್ಯಾಪಾರಿಗಳಿಗೆ ಮೇಲು ಹೊದಿಕೆಯುಳ್ಳ ತಳ್ಳುಗಾಡಿಗಳನ್ನು ಹಸ್ತಾಂತರ ಮಾಡಲಾಯಿತು. ಕನಕಗಿರಿ ಸರ್ಕಾರಿ ಶಾಲೆಗೆ 100 ಚೇರ್‌ಗಳ ವಿತರಣೆ ಮಾಡಲಾಯಿತು. ಶಾಸಕ ಕೆ.ಹರೀಶ್ ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್‌ಗಳಾದ ನಾರಾ ಯಣ್, ಪುರುಷೋತ್ತಮ್, ಬಿ.ಎಲ್.ಭೈರಪ್ಪ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಶಿವಣ್ಣ, ಕಲ್ಯಾಣ ಮಂಟಪಗಳ ಮಾಲೀಕರ ಸಂಘದ ಜಿಲ್ಲಾಧ್ಯಕ್ಷ ಸತ್ಯನಾರಾಯಣ್ ಮುಂತಾದವರಿದ್ದರು.

> ನಾನು ಯಾವ ವರ್ಷವೂ ಹುಟ್ಟಹಬ್ಬ ಆಚರಣೆ ಮಾಡಿಕೊಂಡವನಲ್ಲ. ಬಡತನ ಮತ್ತು ಬಡವರ ನಡುವೆ ಬೆಳೆದವನು. ಸಮ ಸಮಾಜದ ಜಾಗೃತಿ ಇಟ್ಟುಕೊಂಡು ನನ್ನ ಕೈಲಾದಷ್ಟು ಕಿಂಚಿತ್ತು ಸೇವೆಯನ್ನು ಸದಾಕಾಲ ಮಾಡಿಕೊಂಡು ಬಂದಿದ್ದೇನೆ. ಸಾವಿರಾರು ಜನರು ಆರೋಗ್ಯ ಶಿಬಿರದಲ್ಲಿ ಭಾಗವಹಿಸಿರುವುದು ಕಾರ್ಯಕ್ರಮದ ಅಗತ್ಯತೆಯನ್ನು ತೋರಿಸುತ್ತಿದೆ. ಮುಂದಿನ ದಿನಗಳಲ್ಲೂ ಸಮಾಜ ಮುಖಿಯಾಗಿ ಬದುಕುತ್ತೇನೆ.
>
> ▸▸ **ಎಚ್.ವಿ.ರಾಜೀವ್** ಕಾಂಗ್ರೆಸ್ ಮುಖಂಡ

# ಲಾಭದತ್ತ ಅಭ್ಯುದಯ ಸಹಕಾರ ಸಂಘ



ಮೈಸೂರು: ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘವು 2025–26ನೇ ಸಾಲಿನಲ್ಲಿ 65,855 ರೂ.ಗಳ ನಿವ್ವಳ ಲಾಭ ಮಾಡಿದೆ. ಮುಂದಿನ ದಿನಗಳಲ್ಲಿ ಆರ್ಥಿಕ ಬಲವರ್ಧನೆಗೆ ವ್ಯಾಪಾರ ವಹಿವಾಟುಗಳನ್ನು ಆರಂಭಿಸಲು ಅನುಮೋದನೆ ಪಡೆಯಲಾಗಿದೆ.

ನಗರದ ಪತ್ರಕರ್ತರ ಭವನದಲ್ಲಿ ನಡೆದ 10ನೇ ಸರ್ವ ಸದಸ್ಯರ ಸಭೆ, ಅಭ್ಯುದಯ ಸಹಕಾರಿ ರತ್ನ ಪ್ರಶಸ್ತಿ ಪ್ರದಾನ ಹಾಗೂ ವೈದ್ಯಕೀಯ ಉಪಕರಣ ವಿತರಣೆಯ ಸಮಾರಂಭವನ್ನು ಹುಣಸೂರು ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಹೆಚ್.ಪಿ.ಅಮರನಾಥ್ ಉದ್ಘಾಟಿಸಿದರು. ನಂತರ ಮಾತನಾಡಿ, ಸಹಕಾರ ಸಂಘಗಳು ಆರ್ಥಿಕ ಸ್ವಾವಲಂಬನೆಯ ಹೆಬ್ಬಾಗಿಲುಗಳಾಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಹಸ್ತ ಕ್ಷೇಪ ಹೆಚ್ಚಾಗಿ ಅನೇಕ ಸಂಘಗಳು ಕೋರ್ಟ್ ಕಟ್ಟಲೆ ಮೆಟ್ಟಿಲೇರಿವೆ. ಇದರಿಂದ ಸಹಕಾರಿ ತತ್ವಕ್ಕೆ ಧಕ್ಕೆ ಉಂಟಾಗುತ್ತಿದೆ. ಸಹಕಾರ ಸಂಘಗಳು ಮುನ್ನ ಡೆಸುವುದು ಅತ್ಯಂತ ಸವಾಲಿನ ಸಂಗತಿಯಾಗಿದೆ. ಎಂದರು. ಸಂಘದ ಅಧ್ಯಕ್ಷ ಕೆ. ದೀಪಕ್ ಮಾತನಾಡಿದರು. ಪತ್ರಕರ್ತ, ನೇರಳೆಕುಪ್ಪೆ ಹಾಲು ಉತ್ಪಾದಕರ ಸಂಘದ ನಿರ್ದೇಶಕ ಎನ್. ಕೆ.ಮಹದೇವಗೆ ಈ ಸಾಲಿನ ಅಭ್ಯುದಯ ಸಹಕಾರಿ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಯೂನಿಯನ್‌ನ ನಿರ್ದೇಶಕರಾದ ಹೆಚ್.ಎಸ್ ಪ್ರಶಾಂತ್ ತಾತಾಚಾರ್ ಪ್ರಶಸ್ತಿ ಪ್ರದಾನ ಮಾಡಿದರು. ರಾಜ್ಯ ಪತ್ರ ಬರಹಗಾರರ ಸಂಘದ ಉಪಾಧ್ಯಕ್ಷ ಎಂ.ಎಸ್. ಧನಂಜಯ ಆರೋಗ್ಯ ತಪಾಸಣಾ ಉಪಕರಣ ವಿತರಣೆ ಮಾಡಿ ಸಂಘಕ್ಕೆ ಶುಭಕೋರಿದರು. ಉಪಾಧ್ಯಕ್ಷ ಹನಗೋಡು ನಟರಾಜ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ನಿರ್ದೇಶಕ ಧರ್ಮಾಪುರ ನಾರಾಯಣ್, ನಿರ್ದೇಶಕರಾದ ಹೆಚ್.ಎಸ್. ದಿನೇಶ್ ಕುಮಾರ್, ಮುಕುಂದ, ಕೆಂಪೇಗೌಡ, ಪ್ರಗತಿ ಗೋಪಾಲಕೃಷ್ಣ, ಯಶವಂತ ಸಾಲಿಗ್ರಾಮ, ಕಬಿನಿ ಮಂಜು, ನಂಜುಂಡಯ್ಯ, ಜಯಶಂಕರಮೂರ್ತಿ, ಅಪ್ಸರ್ ಪಾಷ, ಜ್ಯೋತಿ ಜಯಸೇನಾ, ಶಿಲ್ಪ, ಕಾರ್ಯದರ್ಶಿ ಎನ್.ಕೆ.ವನಿತಾಶ್ರೀ ಹಾಜರಿದ್ದರು.

**: ಎಚ್.ಎಂ. ಮಹದೇವಶೆಟ್ಟಿ ಹೇಳಿಕೆ | 186 ಮಂದಿ ರೈತರಿಗೆ 1.99 ಕೋಟಿ ರೂ.ಗಳ ಬೆಳೆ ಸಾಲ ವಿತರಣೆ : 11 ವರ್ಷಗಳ ಅವಧಿಯಲ್ಲಿ 13 ಕೋಟಿ ರೂ.ಗಳ ವ್ಯವಹಾರ**

# ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘ 1.99 ಲಕ್ಷ ರೂ. ನಿವ್ವಳ ಲಾಭ




ಚಾಮರಾಜನಗರ, ಹರದನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಉತ್ತಮ ವಹಿವಾಟು ನಡೆಸಿ, ಸಂಘದ 186 ಮಂದಿ ರೈತರಿಗೆ ಕೃಷಿ ಸಾಲವಾಗಿ 1.99 ಕೋಟಿ ರೂ.ಗಳನ್ನು ವಿತರಣೆ ಮಾಡಿದ್ದು, ಪ್ರಸಕ್ತ ವರ್ಷ 1.99 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದು ಹರದನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಎಂ. ಮಹದೇವಶೆಟ್ಟಿ ತಿಳಿಸಿದರು.

ತಾಲೂಕಿನ ಹರದನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2025–26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘದ ಸದಸ್ಯರು ಸಹಕಾರ ಮತ್ತು ಸಂಘದಿಂದ ಪಡೆದುಕೊಂಡಿದ್ದ ಸಾಲವನ್ನು ಸಕಾಲದಲ್ಲಿ ಮರು ಪಾವತಿ ಮಾಡಿದ್ದರಿಂದ ಹೆಚ್ಚಿನ ಲಾಭವನ್ನು ಗಳಿಸಲು ಸಾಧ್ಯವಾಗಿದೆ. ನಮ್ಮ ಸಂಘವು ಪ್ರತಿ ವರ್ಷವು ಸಹ ಲಾಭದಲ್ಲಿದ್ದು, ಸ್ವಂತ ಕಟ್ಟಡವನ್ನು ಹೊಂದಿದೆ. ಕಟ್ಟಡ ನಿರ್ಮಾಣಕ್ಕೆ ಪಡೆದುಕೊಂಡಿದ್ದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ಜೊತೆಗೆ ಎಲ್ಲಾ ಮೂಲಗಳಿಂದ ಸಹಕಾರ ಸಂಘವು ಉತ್ತಮವಾಹಿ ವ್ಯವಹಾರ ಮಡಿದ ಪರಿಣಾಮ 1.99 ಲಕ್ಷ ರೂ. ನಿವ್ವಳ ಲಾಭ ಬಂದಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ನಿವ್ವಳ ಲಾಭವನ್ನು ಪಡೆದುಕೊಳ್ಳುವ ಜೊತೆಗೆ ಸಂಘದ ಸದಸ್ಯರಿಗೆ ಇದರ ಲಾಭಾಂಶವನ್ನು ಮುಂದಿನ ದಿನಗಳಲ್ಲಿ ಹಂಚಿಕೆ ಮಾಡಲಾಗುತ್ತದೆ ಎಂದು ಮಹದೇವಶೆಟ್ಟಿ ತಿಳಿಸಿದರು.

ಸಂಘವು 11 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, 2041 ಮಂದಿ ಷೇರುದಾರರು 3451200 ರೂ.ಗಳ ಷೇರು ಹಣವನ್ನು ಹೊಂದಿದೆ. ಸಂಘಕ್ಕೆ 467 ಮಂದಿ ಸದಸ್ಯರು ಪಿಗ್ಮಿಯಿಂದಲೇ 96,21,450 ರೂ.ಗಳ ಸಂಗ್ರಹವಾಗುತ್ತಿದೆ. ಸಂಘದ ವಹಿವಾಟು ನೋಡಿ ವಿಶ್ವಾಸ ಹೊಂದಿ ಸಂಘದ ಉಳಿತಾಯ ಖಾತೆಯಲ್ಲಿ 609 ಮಂದಿ 11,02956 ರು.ಗಳ ಉಳಿತಾಯ ಮಾಡಿದ್ದಾರೆ ಎಂದು ತಿಳಿಸಿದರು. ಸಂಘವು ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಜೊತೆಗೆ ಸಕಾಲದಲ್ಲಿ ಮರು ಪಾವತಿ ಮಾಡುವ ಮೂಲಕ ಹೆಚ್ಚು ಮಂದಿ ರೈತರು ಶೂನ್ಯ ಬಡ್ಡಿ ಸಾಲ ವನ್ನು ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಪ್ರತಿ ವರ್ಷವು ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಿದ್ದು ಈ ಬಾರಿ 186 ಮಂದಿ ರೈತರಿಗೆ 1,99,86000 ರೂ.ಗಳ ಸಾಲವನ್ನು ನೀಡಿದೆ. ಸಂಘದಿಂದ ಬಳಕೆ ಸಾಲವಾಗಿ 230 ಮಂದಿಗೆ 1.21 ಕೋಟಿ ರು. ನೀಡಲಾಗಿದೆ. ವಾಹನ ಸಾಲವಾಗಿ 5 ಮಂದಿಗೆ 1.92 ಲಕ್ಷ ರೂ.ಗಳ ನೀಡಲಾಗಿದೆ. ಒಟ್ಟಾರೆ ಸಂಘವು ತಾಲೂಕಿನಲ್ಲಿಯೇ ಉತ್ತಮವಾಗಿ ಸಂಘವಾಗಿ ಹೊರ ಹೊಮ್ಮಿದ್ದು, ನಿಮ್ಮೆಲ್ಲರ ಸಹಕಾರ, ಬೆಂಬಲದಿಂದ ಸಾಧ್ಯವಾಗಿದೆ ಎಂದು ಮಹದೇವಶೆಟ್ಟಿ ತಿಳಿಸಿದರು.

ನಮ್ಮ ಸಂಘವನ್ನು ಬ್ಯಾಂಕ್ ಮಾದರಿಯಾಗಿ ಪರಿವರ್ತನೆ ಮಾಡಲಾಗಿದೆ. ರೈತರ ಖಾತೆಗಳನ್ನು ಕಂಪ್ಯೂಟೀಕರಣಗೊಳಿಸಿ, ಗ್ರಾಹಕರಿಗೆ ಬ್ಯಾಂಕ್ ಮಾದರಿಯಲ್ಲಿ ಸೇವೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಸೇವೆಯನ್ನು ಸದಸ್ಯರಿಗೆ ಕಲ್ಪಿಸಿಕೊಡಲಾಗುವುದು ಎಂದರು.

ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಟಿ. ಮಂಜು ಮಾತನಾಡಿ, ಹರದನಹಳ್ಳಿ ಸಹಕಾರ ಸಂಘವು ಕಡಿಮೆ ಅವಧಿಯಲ್ಲಿ ಹೆಚ್ಚು ಸಾಧನೆ ಮಾಡಿದೆ. ಬಹಳಷ್ಟು ಸಂಘಗಳು ಇನ್ನು ಸಹ ಸ್ವಂತ ಕಟ್ಟಡವನ್ನು ಹೊಂದಲು ಸಾಧ್ಯವಾಗಿಲ್ಲ. ಆದರೆ, ಹರದನಹಳ್ಳಿ ಸಹಕಾರ ಸಂಘ ಇದಕ್ಕೆ ಮಾದರಿಯಾಗಿ ಬ್ಯಾಂಕ್ ಮಾದರಿಯಲ್ಲಿ ವಹಿವಾಡು ನಡೆಸುತ್ತಿದೆ. ಆಡಳಿತ ಮಂಡಲಿ ಹಾಗು ನೌಕರರ ಶ್ರಮ ಬಹಳ ಇದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಸಂಘದ ಸದಸ್ಯರು ಸಂಘವನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಮುನ್ನಡೆಸುವ ಜೊತೆಗೆ ಸಂಘದ ಖರ್ಚು ವೆಚ್ಚಗಳನ್ನು ಕಡಿತಗೊಳಿಸಿ, ಸದಸ್ಯರಿಗೆ ಲಾಭಂಶವನ್ನು ವಿಲೇವಾರಿ ಮಾಡಬೇಕು. ಆಹ್ವಾನ ಪತ್ರಿಕೆಯ ಜೊತೆಯಲ್ಲಿ ಅಡಿಟ್ ವರದಿಯನ್ನು ಮುದ್ರಿಸಿಕೊಡುವಂತೆ ಸಲಹೆ ಸೂಚನೆಗಳನ್ನು ನೀಡಿದರು. ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಕೆ. ಸಿದ್ದರಾಜು ವಾರ್ಷಿಕ ವರದಿಯನ್ನು ಮಂಡಿಸಿ, ಅನುಮೋದನೆ ಪಡೆದುಕೊಂಡರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷೆ ಸುಮ, ನಿರ್ದೇಶಕರಾದಎಸ್. ಪುಟ್ಟರಾಜ ಶೆಟ್ಟಿ ಬಂಗಾರನಾಯಕ್, ರಾಜಣ್ಣ, ಆರ್.ವೆಂಕಟೇಶ್, ಎಂ. ಬಂಗಾರಶೆಟ್ಟಿ, ಎಂ. ರವಿಕುಮಾರ್, ವಿ. ರವಿಕುಮಾರ್, ಶಫಿ ಅಹಮದ್, ಗಿರಿಜಮ್ಮ, ಸಾವಿತ್ರಿ, ನೌಕರರಾದ ಎಸ್. ಮಂಜು, ವೈ.ಜಿ. ನವೀನ್ಕುಮಾರ್, ಸಿದ್ದರಾಜು, ವಿ. ಯೋಗನರಸಿಂಹಸ್ವಾಮಿ, ಎಸ್. ಕೃಷ್ಣರಾಜ್ ಹಾಗೂ ಸರ್ವ ಸದಸ್ಯರು ಇದ್ದರು.

# ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ವಿಶ್ವಕರ್ಮ ಜಯಂತಿ



**ಚಾಮರಾಜನಗರ,** ನಗರದ ಶ್ರೀ ಕಮಟೇಶ್ವರಸ್ವಾಮಿ ಸಮೇತ ಶ್ರೀ ಕಾಳಿಕಾಂಬ ದೇವಸ್ಥಾನದಲ್ಲಿ ಶ್ರೀ ವಿಶ್ವಕರ್ಮ ಜಯಂತಿಯನ್ನು ಆಚರಣೆ ಮಾಡಲಾಯಿತು.

ದೇವಸ್ಥಾನದ ಅವರಣದಲ್ಲಿ ನಡೆದ ಜಯಂತಿ ಕಾರ್ಯಕ್ರಮದಲ್ಲಿ ಭಗವಾನ್ ವಿಶ್ವಕರ್ಮರು ಹಾಗು ಕಾಳಿಕಾಂಬ ದೇವಿಗೆ ನಂಜನಗೂಡಿನ ಜುಂಜಾವೀರಾಚಾರ್ ಅವರ ಪೂಜಾಕೈಂಕರ್ಯಗಳನ್ನು ನೆರವೇರಿಸಿಕೊಟ್ಟರು. ಸಮಾಜದ ಬಂಧುಗಳು ಭಗವಾನ್ ವಿಶ್ವಕರ್ಮರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ವಿಶೇಷ ಪೂಜೆ ಸಲ್ಲಿಸಿದರು.

ಶ್ರೀ ಕಾಳಿಕಾಂಬ ಟ್ರಸ್ಟ್‌ನ ಎಸ್. ನಂದೀಶ್ ವಿಶ್ವಕರ್ಮ ಮಾತನಾಡಿ, ವಿಶ್ವಕರ್ಮರಲ್ಲಿ ಐದು ಪಂಗಡಗಳಿದ್ದು, ಋಗ್ವೇದದಲ್ಲಿ ಹೇಳಿರುವಂತೆ ವಿಶ್ವಕರ್ಮರು ಇಡೀ ಬ್ರಹ್ಮಾಂಡವನ್ನು ಸೃಷ್ಟಿ ಮಾಡಿದ ಕರ್ತರು. ವಿಶ್ವ ಅಂದರೆ ಜಗತ್ತು, ಕರ್ಮ ಎಂದರೆ ಕೆಲಸ ಅಥವಾ ಸೃಷ್ಟಿ ಎಂದರ್ಥವಾಗುತ್ತದೆ. ವಿಶ್ವಕರ್ಮರು ಜಗತ್ತನ್ನೇ ಸೃಷ್ಟಿ ಮಾಡಿದವರು ಎಂದು ಪುರಾಣಗಳಲ್ಲಿಯೂ ಉಲ್ಲೇಖ ಮಾಡಲಾಗಿದೆ. ಶಿವನ ತ್ರಿಶೂಲ, ವಿಷ್ಣುವಿನ ಸುದರ್ಶನ ಚಕ್ರ, ಇಂದ್ರನ ವಜ್ರಯುಧ ಹಾಗೂ ಕಾರ್ತೇಕೇಯನ ಶಕ್ತಿ ಆಯುಧವನ್ನು ರೂಪಿಸಿದ ಕೀರ್ತಿ ವಿಶ್ವಕರ್ಮರಿಗೆ ಸಲ್ಲುತ್ತದೆ, ದೇವತೆಗಳು ಸಂಚರಿಸುವ ಪುಷ್ಪಕ ವಿಮಾನ ಸೇರಿದಂತೆ ವಿವಿಧ ರಥಗಳನ್ನು ನಿರ್ಮಿಸಿವರು ವಿಶ್ವಕರ್ಮರಾಗಿದ್ದಾರೆ ಎಂದು ತಿಳಿಸಿದರು.

ಪಂಚ ಕಸುಬುಗಳಲ್ಲಿ ಚಿನ್ನದ ಕೆಲಸ, ಮರ ಕೆಲಸ, ಕಬ್ಬಿಣದ ಕೆಲಸ, ದೇವಸ್ಥಾನದ ಶಿಲ್ಪಿ ಕಲೆಗಳ ಕೆತ್ತನೆ ಮಾಡುವ ವಿಶ್ವಕರ್ಮರು ಪ್ರಪಂಚದ ಮೊದಲ ನೇ ಇಂಜಿನಿಯರ್ ಎಂದರೆ ತಪ್ಪಾಗಲಾರದು ಎಂದು ವಿಶ್ವಕರ್ಮ ರ ಸಾಧನೆ ಮತ್ತು ಶಿಲ್ಪಕಲೆಗಳ ವೈವಿಧ್ಯತೆಯನ್ನು ಬಣಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಕರ್ಮ ಸಮಾಜದ ಬಗ್ಗೆ ವಿಶೇಷ ಕಾಳಜಿಯನ್ನು ಹೊಂದಿದ್ದಾರೆ. ವಿಶ್ವಕರ್ಮರ ಜಯಂತಿ ದಿನವನ್ನು ವಿಶೇಷವಾಗಿ ಪಿಎಂ. ವಿಶ್ವಕರ್ಮ ಯೋಜನೆಯನ್ನು ಜಾರಿ ಮಾಡಿದ್ದರು. ಈ ಯೋಜನೆಯಡಿಯಲ್ಲಿ ಬಹಳಷ್ಟು ಮಂದಿ ಈಗಾಗಲೇ ಫಲಾನುಭವಿಗಳಿದ್ದು, ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸ್ವಾವಲಂಬನೆ ಹೊಂದಬೇಕು. ಕಾಕತಾಳೀಯ ಎಂಬಂತೆ ಇಂದು ಪ್ರಧಾನಿ ನರೇಂದ್ರ ಮೋದಿ ಅವರು ಜನ್ಮ ದಿನವು ಸಹ ಆಗಿದೆ. ಭಗವಾನ್ ವಿಶ್ವಕರ್ಮರ ಆರ್ಶೀವಾದ ಸದಾ ಕಾಲವು ಇರಲಿ. ವಿಶ್ವವೇ ಮೆಚ್ಚುವಂತ ಕಾರ್ಯಕ್ರಮಗಳನ್ನು ಮೋದಿ ಅವರು ನೀಡಿ, ವಿಕಸಿತ ಭಾರತ ನಿರ್ಮಾಣದ ಕನಸು ನನಸಾಗಲಿ ಎಂದು ಶುಭ ಕೋರಿದರು.

ಮತ್ತೋರ್ವ ಮುಖಂಡ ವಿ. ಶ್ರೀನಿವಾಸಪ್ರಸಾದ್ ಮಾತನಾಡಿ, ವಿಶ್ವಕರ್ಮರು ಕುಲ ಕಸುಬ ಆಧಾರದಲ್ಲಿ ಅಲ್ಲಲ್ಲಿ ಚದುರಿ ಹೋಗಿದ್ದು, ಎಲ್ಲರು ಒಗ್ಗಟ್ಟಿನಿಂದ ವಿಶ್ವಕರ್ಮ ಎಂಬ ಒಂದೇ ಪದದಡಿಯಲ್ಲಿ ಸಂಘಟಿತರಾ ದರೆ ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಸಮಾಜವನ್ನು ಒಗ್ಗೂಡಿಸುವ ಕೆಲಸವನ್ನು ಎಲ್ಲರು ಮಾಡೋಣ ಎಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಆರ್.ಸಿ. ನಾಗರಾಜಚಾರ್, ಸಿ.ಎಂ. ಪ್ರಶಾಂತ್, ಕಾಶಿ ನಾಗೇಂದ್ರಪ್ರಸಾದ್, ಶ್ರೀಕಾಂತ್, ಜಿ. ಸುರೇಶ್, ಸ್ವಾಮಿ, ರಮೇಶ್, ಮಿತ್ರೇಶ್, ನಾಗರಾಜ ಪಟೇಲ್, ಕೆ.ಎನ್.ಸುರೇಶ್, ಸುಬ್ರಮಣ್ಯಚಾರ್, ನಟರಾಜು, ಸೋಮು(ಕಿಟ್ಟಿ) ಪ್ರದೀಪ್, ಶ್ರೀಕಂತಣ್ಣ, ಸುರೇಶ್, ಲೀಲಾವತಿಶಂಕರ್, ಶಶಿರೇಖಾ, ನಂದಿತಾ, ಮಂಜುಳಾ, ಆಶಾ, ಆಶ್ವಿನಿ, ನಾಗಲಕ್ಷ್ಮಿ, ನೂತನ್ ಹಾಜರಿದ್ದರು.

# ಹೊಲಿಗೆ ವೃತ್ತಿಯಿಂದ ಸ್ವಾವಲಂಬನೆ



ಚಾಮರಾಜನಗರ: ಮಹಿಳೆಯರು ತಮ್ಮ ದೈನಂದಿನ ಚಟುವಟಿಕೆಗಳ ಜತೆಗೆ ಆದಾಯದ ಮೂಲವಾಗಿ ಹೊಲಿಗೆ ವೃತ್ತಿಯನ್ನು ತೊಡಗಿಸಿ ಕೊಂಡಲ್ಲಿ ಆರ್ಥಿಕವಾಗಿ ಸದೃಢತೆ ಹೊಂದಬ ಹುದಾಗಿದೆ ಎಂದು ರೇಷ್ಮೆ ಮತ್ತು ಪಶು ಸಂಗೋಪನೆ ಕೃಷಿ ಸಚಿವ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಪ್ರವಾಸಿಮಂದಿರದಲ್ಲಿ ಡಿ.ದೇವರಾಜು ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 19ಮಂದಿ ಹಿಂದು ಳಿದ ವರ್ಗಗಳ ಮಹಿಳೆಯರಿಗೆ ಹೊಲಿಗೆ ಯಂತ್ರಗಳ ವಿತರಿಸಿ ಮಾತನಾಡಿ, 2025-26ನೇ ಸಾಲಿನ ಹೊಲಿಗೆ ಯೋಜನೆಯಡಿ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 2025-26ನೇ ಸಾಲಿನ ಹೊಲಿಗೆ 19 ಮಹಿಳೆಯರಿಗೆ ಹೊಲಿಗೆಯಂತ್ರ ವಿತರಿಸಲಾ ಗಿದೆ. ಎಲ್ಲಾ ಫಲಾನುಭವಿಗಳು ಹೊಲಿಗೆಯಂತ್ರ ಸದುಪಯೋಗ ಪಡಿಸಿಕೊಂಡು ಆರ್ಥಿಕ ವಾಗಿ ಸಬಲರಾಗಬೇಕು ಎಂದು ಸಲಹೆ ನೀಡಿ ದರು. ಮುಂದಿನ ದಿನಗಳಲ್ಲೂ ಹೆಚ್ಚು ಹೊಲಿ ಗೆಯಂತ್ರ ವಿತರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ತಾ.ಪಂ.ಮಾಜಿ ಅಧ್ಯಕ್ಷ ಚಿಕ್ಕಮಹದೇವು, ಮುಖಂಡ ನಾಗಯ್ಯ, ಡಿ. ದೇವರಾಜು ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಅಧಿಕಾರಿ ಚೈತ್ರಾ, ಸಚಿವ ಆಪ್ತ ಸಹಾಯಕರಾದ ಎಸ್.ಎಂ.ರವೀಂದ್ರ, ವಿನೋದ್, ಸಿಬ್ಬಂದಿ ಶಿವಣ್ಣ, ರಾಜೇಂದ್ರ, ಮಂಟೇಸ್ವಾಮಿ ಇತರರು ಹಾಜರಿದ್ದರು.

## ಕೆರೆಗಳಿಗೆ ನೀರು ತುಂಬಿಸುವವರೆಗೂ ಧರಣಿ ಕೈಬಿಡುವುದಿಲ್ಲ

### 27ನೇ ದಿನಕ್ಕೆ ರೈತರ ಹೋರಾಟ

### ತಾಲೂಕು ಕಚೇರಿ ಎದುರು ಪ್ರತಿಭಟನೆ, ಬೇಡಿಕೆಗಳು



ಗುಂಡ್ಲುಪೇಟೆ: ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವುದು, ಸಾಗುವಳಿ ಹಕ್ಕುಪತ್ರ ವಿತರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪಟ್ಟಣದ ತಾಲೂಕು ಕಚೇರಿ ಎದುರು ರೈತಸಂಘ ನಡೆಸುತ್ತಿರುವ ಅಹೋರಾತ್ರಿ ಧರಣಿ 27ನೇ ದಿನಕ್ಕೆ ಕಾಲಿಟ್ಟಿದೆ. ಕೆರೆಗಳಿಗೆ ನೀರು ತುಂಬಿಸುವುದು, ಸಾಗುವಳಿ ಹಕ್ಕುಪತ್ರ ವಿತರಣೆ, ದುರಸ್ತಿ, ಪೋಡಿ, ಎನ್‌ಒಸಿ ಹಾಗೂ 1 ಟು 5 ಪ್ರಕ್ರಿಯೆ ಪೂರ್ಣಗೊಳಿಸುವವರೆಗೂ ಹೋರಾಟ ಕೈಬಿಡುವುದಿಲ್ಲ ಎಂದು ರೈತರು ಸ್ಪಷ್ಟಪಡಿಸಿದರು. ಧರಣಿಯ ಅಂಗವಾಗಿ ಶನಿವಾರ ರೈತಸಂಘದ ಮುಖಂಡರು ಹಾಗೂ ರೈತರು ಹಳೆ ಪ್ರವಾಸಿ ಮಂದಿರದಿಂದ ಪೊರಕೆ ಹಿಡಿದು ಮೆರವಣಿಗೆ ನಡೆಸಿ, ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗುತ್ತಾ ಧರಣಿ ಸ್ಥಳಕ್ಕೆ ಆಗಮಿಸಿದರು.

**63 ಕೋಟಿ ಪೈಪ್ಲೈನ್ ಕಾಮಗಾರಿ ಶೀಘ್ರ ಆರಂಭ: ಸಚಿವ ಸಿ. ಪುಟ್ಟರಂಗಶೆಟ್ಟಿ**

ಧರಣಿ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಹಾಗೂ ಪಶು ಸಂಗೋಪನಾ ಸಚಿವ ಸಿ. ಪುಟ್ಟರಂಗಶೆಟ್ಟಿ ರೈತರೊಂದಿಗೆ ಮಾತುಕತೆ ನಡೆಸಿದರು. ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ಉದ್ದೇಶದಿಂದ ?63 ಕೋಟಿ ವೆಚ್ಚದ ಪೈಪ್ಲೈನ್ ಕಾಮಗಾರಿಗೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಮತ್ತು ಮೂರು ತಿಂಗಳ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕಲ್ಲುಕಟ್ಟೆ ಸೇರಿದಂತೆ ನಾಲ್ಕನೇ ಹಂತದ ಕೆರೆಗಳಿಗೆ ನೀರು ತುಂಬಿಸುವ ವಿಚಾರದಲ್ಲಿ ಹಲವು ವರ್ಷಗಳಿಂದ ಸಮಸ್ಯೆ ಇದೆ. ಹಿಂದೆ ಮಾಜಿ ಸಚಿವ ದಿ. ಮಹದೇವಪ್ರಸಾದ್ ಅವರು ಪೈಪ್ಲೈನ್ ಮೂಲಕ ಕೆರೆಗಳಿಗೆ ನೀರು ಹರಿಸುವ ಕುರಿತು ಮಾತುಕತೆ ನಡೆಸಿದ್ದರು, ಆದರೆ ಮಾಜಿ ಶಾಸಕರು ಕಾಮಗಾರಿ ನಡೆಯಲು ಅವಕಾಶ ನೀಡಲಿಲ್ಲ.ಪ್ರತಿಭಟನೆ ಬದಲು ಒಟ್ಟಾಗಿ ಕುಳಿತು ಚರ್ಚಿಸುವ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಹಾಗೂ ಮೇವಿನ ಕೊರತೆ ನೀಗಿಸಲು ಸಹಕಾರ ನೀಡುವಂತೆ ಅವರು ಮನವಿ ಮಾಡಿದರು.

**ಸಾಗುವಳಿ ಹಕ್ಕುಪತ್ರ ಮತ್ತು ಅರಣ್ಯ ಪ್ರದೇಶದ ಸಮಸ್ಯೆ**

ಬಗರ್ಹುಕುಂ ಸಾಗುವಳಿ ಜಮೀನಿನಲ್ಲಿ ರೈತರು ಉಳುಮೆ ಮಾಡುತ್ತಿರುವುದು ಸೇರಿದಂತೆ ವಿವಿಧ ಅಂಶಗಳನ್ನು ಪರಿಗಣಿಸಿ ಹಕ್ಕುಪತ್ರ ನೀಡುವ ಪ್ರಕ್ರಿಯೆ ನಡೆಯುತ್ತಿದೆ ಹಾಗೂ ತಾಲೂಕಿನಲ್ಲಿ ಸಲ್ಲಿಕೆಯಾಗಿರುವ ಸುಮಾರು 3 ಸಾವಿರ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು. ಇದೇ ವೇಳೆ ಮಾತನಾಡಿದ ರೈತ ಮುಖಂಡ ಮಹದೇವಪ್ಪ ಶಿವಪುರ, 2018ರಿಂದ 8,114 ಮಂದಿ ಸಾಗುವಳಿಗಾಗಿ ಅರ್ಜಿ ಸಲ್ಲಿಸಿದ್ದು, 4,114 ಅರ್ಜಿಗಳು ತಿರಸ್ಕೃತವಾಗಿವೆ, 406 ರೈತರಿಗೆ ಮಾತ್ರ ಹಕ್ಕುಪತ್ರ ವಿತರಿಸಲಾಗಿದ್ದು, 3,592 ರೈತರಿಗೆ ಇನ್ನೂ ಹಕ್ಕುಪತ್ರ ನೀಡಿಲ್ಲ ಎಂದು ಅಂಕಿ-ಅಂಶ ನೀಡಿದರು. ಜೊತೆಗೆ, ಸುಮಾರು 17 ಸಾವಿರ ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯ ಪ್ರದೇಶವೆಂದು ಪರಿಗಣಿಸಿರುವುದರಿಂದ ರೈತರಿಗೆ ತೊಂದರೆಯಾಗಿದ್ದು, ಈ ಸಮಸ್ಯೆಗೂ ಪರಿಹಾರ ಕಲ್ಪಿಸಬೇಕು ಎಂದರು.

**ಕೆರೆಗಳಿಗೆ ಏಕಕಾಲದಲ್ಲಿ ನೀರು ಹರಿಸಲು ಆಗ್ರಹ ಹಾಗೂ ಶಾಸಕರ ಮನವಿ**

ನಾಲ್ಕನೇ ಹಂತದ ನಾಲ್ಕು ಕೆರೆಗಳಿಗೆ ನೀರು ತುಂಬಿಸಿದ ಬಳಿಕ ವಡಯನಪುರ, ಕಲ್ಕಟ್ಟ ಕೆರೆ ಹಾಗೂ ವಿಜಯಪುರ ಅಮಾನಿ ಕೆರೆಗಳಿಗೂ ನೀರು ಹರಿಸಬೇಕು, ಮೂರು ಹಂತದ ಕೆರೆಗಳಿಗೂ ಏಕಕಾಲದಲ್ಲಿ ನೀರು ತುಂಬಿಸುವ ವ್ಯವಸ್ಥೆಯಾಗಬೇಕು ಎಂದು ಮಹದೇವಪ್ಪ ಶಿವಪುರ ಆಗ್ರಹಿಸಿದರು. ಶಾಸಕ ಎಚ್.ಎಂ. ಗಣೇಶಪ್ರಸಾದ್ ಮಾತನಾಡಿ, ಸೆಪ್ಟೆಂಬರ್ 6ರಂದು ತಾಲೂಕಿನ ಕೆರೆಗಳಿಗೆ ನೀರು ಬಿಡುವುದಾಗಿ ತಿಳಿಸಲಾಗಿತ್ತು, ಆದರೆ ಅದು ಕಾರ್ಯರೂಪಕ್ಕೆ ಬಂದಿಲ್ಲ ಎಂದರು. ಜಿಲ್ಲಾಧಿಕಾರಿ ಶ್ರೀರೂಪ, ಜಿಪಂ ಸಿಇಒ ಮೋನಾ ರೋತ್, ಎಸ್ಪಿ ಮುತ್ತುರಾಜ್, ತಹಶೀಲ್ದಾರ್ ತನ್ಮಯ್, ರೈತಸಂಘದ ಮುಖಂಡರು ಹಾಗೂ ರೈತರು ಉಪಸ್ಥಿತರಿದ್ದರು.

# ದೇಶದ ಪ್ರಗತಿಗೆ ಶಿಕ್ಷಕರ ಪಾತ್ರ ಮಹತ್ವದ್ದು

## ಶಾಸಕ ಅನಿಲ್ ಚಿಕ್ಕಮಾದು ಹೇಳಿಕೆ । ಶಿಕ್ಷಕರ ದಿನಾಚರಣೆ ಕಾರ್ಯಕ್ರಮ



ಎಚ್.ಡಿ.ಕೋಟೆ: ಮಕ್ಕಳ ಭವಿಷ್ಯ ರೂಪಿಸುವುದರೊಂದಿಗೆ ದೇಶದ ಪ್ರಗತಿಗೆ ನೆರವಾಗುತ್ತಿರುವ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ಎಲ್ಲ ಕ್ಷೇತ್ರಗಳಲ್ಲಿಯ ಸಾಧಕರ ಸೃಷ್ಟಿಗೆ, ಅಕ್ಷರ ಕಲಿಸಿ ಶಿಕ್ಷಕರು ಮಾರ್ಗದರ್ಶನ ನೀಡುತ್ತಾರೆ. ಆದ್ದರಿಂದ, ಶಿಕ್ಷಕ ವೃತ್ತಿ ಶ್ರೇಷ್ಠ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಕನಕಭವನದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿ, ನನ್ನ ಅವಧಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದ್ದು, ಶಾಲೆಗೆ ಹೊಸ ಕಟ್ಟಡಗಳು, ರಸ್ತೆ ಸಂಪರ್ಕ ಸೇರಿದಂತೆ ಮೂಲಸೌಲಭ್ಯಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ತರಲಾಗುತ್ತಿದೆ. ಕಳೆದ ವರ್ಷದಂತೆ ಮುಂದಿನ ವರ್ಷವೂ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಮೊದಲ ಸ್ಥಾನ ಬರಬೇಕು ಎಂದರು.

ಕೋಟೆ ತಾಲ್ಲೂಕಿನಲ್ಲಿ ನಾನು ಜನಿಸದೇ ಇರಬಹುದು. ನಮ್ಮ ಕುಟುಂಬಕ್ಕೂ ತಾಲೂಕಿಗೂ ಅವಿನಾಭಾವ ಸಂಬಂಧವಿದೆ.ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವ ಮೂಲಕ ಋಣ ತೀರಿಸುವ ಕೆಲಸ ಮಾಡಿತ್ತೇನೆ. ಬಡವರು ಶಿಕ್ಷಣಕ್ಕಾಗಿ ಬಹುತೇಕ ಸರ್ಕಾರಿ ಶಾಲೆಗಳನ್ನು ಅವಲಂಭಿಸಿದ್ದಾರೆ ಅವುಗಳ ಅಭಿವೃದ್ಧಿಗೆ ಇನ್ನಷ್ಟು ಅನುದಾನ ತರಲಾಗುವುದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಮಾತನಾಡಿ, ಶಿಕ್ಷಕರು ಕೇವಲ ಪಠ್ಯ ಬೋಧನೆಗೆ ಸೀಮಿತವಾಗದೆ, ವಿದ್ಯಾರ್ಥಿಗಳಲ್ಲಿ ಶಿಸ್ತು, ಮಾನವೀಯ ಮೌಲ್ಯ, ಆತ್ಮವಿಶ್ವಾಸ ಹಾಗೂ ಸಾಮಾಜಿಕ ಜವಾಬ್ದಾರಿಯ ಗುಣಗಳನ್ನು ಬೆಳೆಸಬೇಕು. ಎಚ್.ಡಿ.ಕೋಟೆ ಹಾಗೂ ಸರಗೂರು ತಾಲ್ಲೂಕಿನ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದೆ. ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಸುಧಾರಿಸಲು ಶಿಕ್ಷಕರು ನಿರಂತರವಾಗಿ ಪ್ರಯತ್ನಿಸುತ್ತಿದ್ದು, ಎಸ್‌ಎಸ್‌ಎಲ್ಸಿ ಫಲಿತಾಂಶದಲ್ಲಿ ಉತ್ತಮ ಸಾಧನೆ ಮಾಡಲು ಎಲ್ಲರೂ ಒಗ್ಗೂಡಿ ಕಾರ್ಯ ನಿರ್ವಹಿಸಿದ್ದೀರ.

ಶಿಕ್ಷಕರ ಸಮಸ್ಯೆಗಳನ್ನು ಇಲಾಖೆಯ ಗಮನಕ್ಕೆ ತಂದು ಹಂತ, ಹಂತವಾಗಿ ಪರಿಹರಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

### ಹಲವರಿಗೆ ಸನ್ಮಾನ

ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಸರ್ಕಾರಿ ಹಾಗೂ ಖಾಸಗೀ ಶಾಲೆಗಳ 37 ಶಿಕ್ಷಕರನ್ನು ಇಲಾಖೆಯಿಂದ ಸನ್ಮಾನಿಸಿ, ಅವರ ಸೇವೆಯನ್ನು ಸ್ಮರಿಸಲಾಯಿತು. ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲ್ಲೂಕಿನ ಎಲ್ಲ ಪತ್ರಕರ್ತರಿಗೂ ಬಿಇಒ ರಾಜು, ಶಾಸಕ ಅನಿಲ್ ಚಿಕ್ಕಮಾದು ಸನ್ಮಾನ ಮಾಡಿದರು.

### ಬೆಳ್ಳಿರಥದ ಮೆರವಣಿಗೆ: ಶಿಕ್ಷಕರ ನೃತ್ಯ

ಬೆಳ್ಳಿ ರಥದಲ್ಲಿರಿಸಿದ್ದ, ಡಾ.ಸರ್ವಪಲ್ಲಿರಾಧಾಕೃಷ್ಣನ್ ಹಾಗೂ ಮಾತೆ ಸಾವಿತ್ರಿಬಾಯಿಪುಲೆ ಅವರ ಭಾವಚಿತ್ರಕ್ಕೆ ಶ್ರೀ ಲಕ್ಮೀವರದರಾಜಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಶಾಸಕ ಅನಿಲ್ ಚಿಕ್ಕಮಾದು ಚಾಲನೆ ನೀಡಿದರು.

### ಗಮನ ಸೆಳೆದ ವರ್ತಮಾನ ದಿನಪತ್ರಿಕೆ

ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಕಳೆದ ಎರಡು ವರ್ಷಗಳಿಂದ ತಾಲ್ಲೂಕು ಜಿಲ್ಲೆಗೆ ಕೊನೆಯ ಸ್ಥಾನ ಪಡೆದು ಶಿಕ್ಷಣಾಸಕ್ತರ ಟೀಕೆಗೆ ಗುರಿಯಾಗಿತ್ತು. 2026ನೇ ಸಾಲಿನ ವಾರ್ಷಿಕ ಪರೀಕ್ಷೆ ಕೇವಲ ಹತ್ತು ತಿಂಗಳು ಇರುವಾಗ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಅಧಿಕಾರವಹಿಸಿಕೊಂಡ ಬಿಇಒ ರಾಜು ಅವರು, ಫಲಿತಾಂಶ ಸುಧಾರಣೆಗೆ ಕೈಗೊಂಡ ಕ್ರಮದ ಬಗ್ಗೆ ವರ್ತಮಾನ ದಿನಪತ್ರಿಕೆ ವಿಶೇಷ ವರದಿ ಪ್ರಕಟಿಸಿತ್ತು. ತಾಲ್ಲೂಕಿನಲ್ಲಿ ಅನುಸರಿಸಿದ್ದ ಶೈಕ್ಷಣಿಕ ಕ್ರಮಗಳನ್ನು ಪ್ರಸಕ್ತ ವರ್ಷದಲ್ಲಿ ಜಿಲ್ಲೆಯ ಎಲ್ಲ ಶಾಲೆಗಳಿಗೂ ವಿಸ್ತರಿಸುವಂತೆ ಜಿಲ್ಲಾಧಿಕಾರಿ, ಜಿ.ಪಂ.ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆದೇಶಿಸಿ ಕಳೆದ ತಿಂಗಳು ಕಲಿಕಾ ಖಾತ್ರಿ ಪರೀಕ್ಷೆಯನ್ನು ನಡೆಸಲಾಗಿತ್ತು. ಈ ಕುರಿತು ವರ್ತಮಾನ ದಿನಪತ್ರಿಕೆ ವರದಿ ಪ್ರಕಟಿಸಿತ್ತು. ಫಲಿತಾಂಶ ಸುಧಾರಣೆಗೆ ಇಲಾಖೆ ಕೈಗೊಂಡಿದ್ದ ಕ್ರಮಗಳ ಆಯ್ದ ಛಾಯಾಚಿತ್ರಗಳನ್ನು ಶುಕ್ರವಾರ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಪ್ರದರ್ಶನ ಮಾಡಲಾಗಿತ್ತು. ಈ ವೇಳೆ ಪತ್ರಿಕೆಯ ವರದಿ ಇದರೊಟ್ಟಿಗೆ ಸ್ಥಾನ ಪಡೆದಿದ್ದು ವಿಶೇಷವಾಗಿತ್ತು.



# ಡಾ.ವಿಷ್ಣುವರ್ಧನ್ ಕನ್ನಡ ಚಿತ್ರರಂಗದ ಶ್ರೇಷ್ಠ ನಟರು



ಚಾಮರಾಜನಗರ: ಸಾಹಸಸಿಂಹ ಡಾ. ವಿಷ್ಣುವರ್ಧನ್ ಕನ್ನಡ ಚಿತ್ರರಂಗದ ಶ್ರೇಷ್ಠ ನಟರಾಗಿ, ಮಾನವೀಯ ಮೌಲ್ಯಗಳ ಹರಿಕಾರರಾಗಿ ಕೋಟ್ಯಾಂತರ ಅಭಿಮಾನಿಗಳ ಹೃದಯದಲ್ಲಿ ನೆಲೆಸಿದ್ದಾರೆ ಎಂದು ಜಿಲ್ಲಾ ವಕೀಲರ ಸಂಘದ ಮಾಜಿ ಅಧ್ಯಕ್ಷ ಉಮ್ಮತ್ತೂರು ಇಂದು ಶೇಖರ್ ಹೇಳಿದರು.

ನಗರದ ಮೈಸೂರು ರಸ್ತೆಯಲ್ಲಿರುವ ಮಕಾವ್ ಹೋಟೆಲ್ ಸಭಾಂಗಣದಲ್ಲಿ ಸಾಹಸಸಿಂಹ ಡಾ.ವಿಷ್ಣು ವರ್ಧನ್ ಅಭಿಮಾನಿ ಸ್ನೇಹ ಬಳಗದ ವತಿಯಿಂದ ನಡೆದ ಡಾ.ವಿಷ್ಣುವರ್ಧನ್ 76ನೇ ಜನ್ಮದಿನೋತ್ಸವ, ಇಂಚರ ಗಾನೋತ್ಸವ ಸೀಸನ್ -3 ವಿಷ್ಣು ಗೀತೆಗಳ ಸ್ವರ ಸಂಭ್ರಮ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಷ್ಣುವರ್ಧನ್ ಭಾರತದ ಶ್ರೇಷ್ಠ ಚಲನಚಿತ್ರ ನಟರಾಗಿದ್ದರು. ಸುಸಂಸ್ಕೃತರು ಹಾಗೂ ಜೀವನ ಮೌಲ್ಯಗಳನ್ನು ಕೋಟ್ಯಾಂತರ ಅಭಿಮಾನಿಗಳಿಗೆ ನೀಡಿದವರು. ವಿಷ್ಣುವರ್ಧನ್ ಚಿತ್ರಗಳು ಸಮಾಜಕ್ಕೆ ಉತ್ತಮ ಸಂದೇಶ ನೀಡಿವೆ ಎಂದರು.

ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಪುಷ್ಪಾರ್ಚನೆ ಮಾತನಾಡಿ, ಸಾಹಸಸಿಂಹ ವಿಷ್ಣುವರ್ಧನ್ ಅವರು ಕನ್ನಡ ಚಿತ್ರರಂಗದ ಅತ್ಯಂತ ಮೇರು ನಟರಾಗಿದ್ದರು. ಅವರ ಚಿತ್ರಗಳ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶಗಳನ್ನು ನೀಡಿದ್ದಾರೆ ಎಂದರು.

ಸಾಹಿತಿ ಸೋಮಶೇಖರ್ ಬಿಸಲವಾಡಿ ಮಾತನಾಡಿ, ಭಾರತೀಯ ಚಲನಚಿತ್ರ ರಂಗದ ಅಪರೂಪದ ವ್ಯಕ್ತಿತ್ವ ಹೊಂದಿದ್ದ ನಟ ವಿಷ್ಣುವರ್ಧನ್ ಸಂತನಂತೆ ಬದುಕಿದ್ದಾರೆ. ಕನ್ನಡ ಚಲನಚಿತ್ರ ರಂಗದ ಮೂಲಕ ವಿಶ್ವಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ವಿಷ್ಣುವರ್ಧನ್ 200ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ ಕನ್ನಡ ನಾಡು ,ನುಡಿ ,ಜಲ, ಭಾಷೆಯ ಜೊತೆಗೆ ಸಾಂಸಾರಿಕ ಜೀವನ ,ರಾಷ್ಟ್ರ ಪ್ರೇಮ, ಸಂಸ್ಕೃತಿಯ ರಕ್ಷಣೆ, ಜೀವನದ ಹೊಂದಾಣಿಕೆ ಹಾಗೂ ಸಾಮಾಜಿಕ ಮೌಲ್ಯಗಳ ಚಿಂತನೆಯ ಆದರ್ಶ ಚಿತ್ರಗಳನ್ನು ರಚಿಸಿದ್ದಾರೆ. ಕೋಟಿ ಅಭಿಮಾನಿಗಳಲ್ಲಿ ಹಾಗೂ ಜನರಲ್ಲಿ ಶ್ರೇಷ್ಠವಾದ ಮೌಲ್ಯಗಳನ್ನು ನೀಡಿದರು. ಅವರು ಬದುಕಿದ್ದಾರೆ .ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಅವರ ಪಾಲಾಗುತ್ತಿತ್ತು. ಎಂದರು ಸಾಹಸಸಿಂಹ ವಿಷ್ಣುವರ್ಧನ್ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಗಮನ ಸೆಳೆಯಿತು.

ಸಾಹಸಸಿಂಹ ಡಾ.ವಿಷ್ಣುವರ್ಧನ್ ಅಭಿಮಾನಿ ಸ್ನೇಹ ಬಳಗದ ಜಿಲ್ಲಾ ಜನಪರ ಹೋರಾಟಗಾರ ಆಲೂರುಮಲ್ಲು, ಜ.ಸುರೇಶ್ ನಾಗ್ ಹರದನಹಳ್ಳಿ, ಎಎಸ್ ಐ ಮಹದೇವಪ್ಪ, ನಿವೃತ್ತ ಪಶು ವೈದ್ಯಾಧಿಕಾರಿ ಡಾ. ಸುಗಂಧರಾಜ್, ಕರಿನಂಜನಪುರ ಕೂಸಣ್ಣ, ವಕೀಲ ಮಲ್ಲು, ಸಿ. ಡಿ. ಪ್ರಕಾಶ್, ಶಿವಣ್ಣ, ಐಸಿರಿ ಸುರೇಶ್ ಮೈಸೂರು, ಬಿಜೆಪಿ ಯುವ ಮೋರ್ಚಾದ ಪ್ರಧಾನ ಕಾರ್ಯದರ್ಶಿಆನಂದ್ ಭಗೀರಥ, ಬಿಜೆಪಿ ಮುಖಂಡ ದಯಾನಿಧಿ, ಡಾ.ಸುಗಂಧರಾಜು, ಮೇಘಶ್ರೀ, ಮಹಾದೇವಸ್ವಾಮಿ ಇತರರು ಹಾಜರಿದ್ದರು.

# ಮೂಲಸೌಕರ್ಯ ಕೊಟ್ಟು ಮನೆ ವಿತರಿಸಿ: ಜಿ.ಟಿ.ಡಿ



**ಮೈಸೂರು:** ಮೂಲ ಸೌಕರ್ಯಗಳನ್ನು ಒದಗಿಸದೇ ನಾನಾ ಯೋಜನೆಗಳಡಿ ಮನೆಗಳನ್ನು ವಿತರಣೆ ಮಾಡಬಾರದು ಎಂದು ಶಾಸಕ ಜಿ.ಟಿ.ದೇವೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಾಲಿಕೆಯ ಶ್ರೀ ಜಯಚಾಮರಾಜಒಡೆಯರ್ ಸಭಾಂಗಣದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಆಶ್ರಯ ವಸತಿ ಸಮಿತಿ ಸಭೆಯಲ್ಲಿ ನಾನಾ ವಸತಿ ಯೋಜನೆಗಳ ಪ್ರಗತಿ ಪರಿಶೀಲಿಸಿ ಮಾತನಾಡಿದರು. ಈಗಾಗಲೇ ನಗರದಲ್ಲಿ ಅನುಷ್ಠಾನಗೊಂಡಿರುವ ವಸತಿ ಯೋಜನೆಗಳನ್ನು ಗಮನಿಸಿದರೆ, ಅವುಗಳಲ್ಲಿ ಬಹುತೇಕ ಕಡೆಗಳಲ್ಲಿ ಸೂಕ್ತ ಮೂಲ ಸೌಕರ್ಯ ಒದಗಿಸದೇ ಪ್ರಮಾಣಪತ್ರಗಳನ್ನು ವಿತರಿಸಲಾಗಿದೆ. ಆದರೆ ಅವುಗಳಿಗೆ ಬೇಕಾದ ಕುರಿಯುವ ನೀರು, ಯುಜಿಡಿ, ಸಮರ್ಪಕ ವಿದ್ಯುತ್ ದೀಪದ ವ್ಯವಸ್ಥೆ ಮಾಡಿಲ್ಲ. ಇದರಿಂದ ನಿವಾಸಿಗಳು ತೊಂದರೆಗಳನ್ನು ಅನುಭವಿಸಬೇಕಾಗಿದೆ. ಹಾಗಾಗಿ ಸದ್ಯ ಅನುಷ್ಠಾನಗೊಳಿಸುತ್ತಿರುವ ಯಾವುದೇ ವಸತಿ ಯೋಜನೆಗಳ ಫಲಾನುಭವಿಗಳಿಗೆ ಸೂಕ್ತ ಮೂಲ ಸೌಕರ್ಯ ಒದಗಿಸದೇ ಮನೆಗಳ ಹಕ್ಕು ಪತ್ರಗಳನ್ನು ವಿತರಿಸದಂತೆ ಸೂಚನೆ ನೀಡಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)ಯಡಿ ಪಾಲಿಕೆಯ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಆಶ್ರಯ ವಸತಿ ಯೋಜನೆಯಡಿ 2446-ಗುಂಪು ಮನೆ ಯೋಜನೆಯನ್ನು ಮಂಡಕಳ್ಳಿ ಗ್ರಾಮದಲ್ಲಿ ಗುಂಪುಮನೆ ನಿರ್ಮಿಸಲಾಗುತ್ತಿದೆ. ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದ್ದು, ಪ್ರಸುತ್ತ ಕಾಮಗಾರಿಯ ಪ್ರಗತಿಯಲ್ಲಿದೆ. ಒಟ್ಟು ಯೋಜನಾ ಮೊತ್ತ 206.87 ಕೋಟಿ ರೂ.ಗಳು ಇದರಲ್ಲಿ ಒಂದು ಘಟಕದ ವೆಚ್ಚ 6.89 ಲಕ್ಷ ರೂ.ಗಳಾಗಿದೆ. ಪಲಾನುಭವಿಗಳಿಂದ ಈ ವರೆಗೆ 22.79 ಕೋಟಿ ರೂ. ಸಂಗ್ರಹಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿ ಯೋಜನೆಯನ್ನು ನೀಡಿರುವ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಫಲಾನುಭವಿಗಳು ನೀಡಬೇಕಾದ ಹಾಗೂ ಸರಕಾದರಿಂದ ದೊರೆಯಬೇಕಾದ ಹಣ ಸಂಗ್ರಹಿಸಲು ನಿಯಮಾನುಸಾರ ಅಧಿಕಾರಿಗಳು ಕ್ರಮವಹಿಸಬೇಕು ಎಂದರು. 2446-ಗುಂಪು ಮನೆ ಯೋಜನೆಯನ್ನು ಮಂಡಕಳ್ಳಿ ಗ್ರಾಮದಲ್ಲಿ ನಿರ್ಮಿಸುತ್ತಿದ್ದು ಸದರಿ ಯೋಜನೆಯ ನಾನಾ ಬ್ಲಾಕ್‌ಗಳಿಗೆ ರಾಜ್ಯದ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಹೆಸರನ್ನು ನಾಮಕರಣ ಮಾಡಲು ಪರಿಶೀಲಿಸಬೇಕು. ಇದಲ್ಲದೇ ಒಟ್ಟು ಮಂಡಕಳ್ಳಿ-2446 ಗುಂಪು ಮನೆಯ ಪ್ರದೇಶಕ್ಕೆ ಚಾಂಮುಡೇಶ್ವರಿ ಆಶ್ರಯ ಬಡಾವಣೆ ಎಂದು ಹೆಸರು ನಾಮಕರಣ ಮಾಡಲು ಕ್ರಮವಹಿಸುವಂತೆ ಸಲಹೆ ನೀಡಿದರು.

# ರೈತರು ಡೈರಿಗೆ ಗುಣಮಟ್ಟ ಹಾಲನ್ನು ನೀಡಿ




**ಚಾಮರಾಜನಗರ :** ರೈತರು ಹಾಲು ಉತ್ಪಾದಕರ ಸಂಘಕ್ಕೆ ಗುಣಮಟ್ಟದ ಹಾಲನ್ನು ಸರಬರಾಜು ಮಾಡುವ ಮೂಲಕ ಸಂಘದ ಅಭಿವೃದ್ಧಿಪಡಿಸಿ ತಾವು ಹೆಚ್ಚಿನ ಲಾಭ ಪಡೆದು ಆರ್ಥಿಕವಾಗಿ ಸಬಲರಾಗಬೇಕು ಎಂದು ಚಾಮುಲ್ ನಿರ್ದೇಶಕ ಹೆಚ್.ಎಸ್.ಬಸವರಾಜು ಸಲಹೆ ನೀಡಿದರು.

ನಗರದ ರಾಮಸಮುದ್ರ ಬೂದಿತಿಟ್ಟು ಕ್ರಾಸ್ ಹಾಲು ಉತ್ಪಾದಕರ ಸಹಕಾರ ಸಂಘದ. ಕಚೇರಿ ಮುಂಭಾಗದಲ್ಲಿ ನಡೆದ ಸಂಘದ 2025?26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ತುಂಬಾ ಗುಣಮಟ್ಟದ ಹಾಲನ್ನು ಸಂಘಕ್ಕೆ ನೀಡಿದರೆ 32 ರೂ.ನಿಂದ 43 ರೂ. ತನಕ ಒಂದು ಲೀಟರ್‌ಗೆ ಒಕ್ಕೂಟ ದರ ನೀಡುತ್ತದೆ. ಸರ್ಕಾರವು ಸಹ ಒಂದು ಲೀಟರ್ ಹಾಲಿಗೆ 5 ಪ್ರೋತ್ಸಾಹಧನ ನೀಡುತ್ತಿದೆ ಎಂದರು.ಮೊದಲು ಒಕ್ಕೂಟದಲ್ಲಿ 25 ಸಾವಿರ ಹಾಲು ಮಾರಾಟ ಆಗುತ್ತಿತ್ತು. ಗ್ರಾಮಗಳಲ್ಲಿ ನಂದಿನಿ ಮಳಿಗೆಗಳನ್ನು ಆರಂಭಿಸಿದ ಮೇಲೆ ಒಂದು ಲಕ್ಷ ಲೀಟರ್ ಹಾಲು ಮಾರಾಟ ಆಗುತ್ತಿದೆ. ಉಳಿದ ಹಾಲನ್ನು ಪ್ಯಾಕೇಟ್ , ಪೌಡರ್ ಮಾಡಲಾಗುತ್ತದೆ. ಅಲ್ಲದೆ ರಾಜ್ಯ ಸರ್ಕಾರ ಕ್ಷೀರ ಭಾಗ್ಯ ಯೋಜನೆಯಡಿಂಯಲ್ಲಿ ಶಾಲಾ ಮಕ್ಕಳಿಗೆ ಹಾಲು ವಿತರಣೆ ಮಾಡುತ್ತಿದೆ. ವಿದ್ಯಾ ಇಲಾಖೆಯ ಮೂಖಾಂತರ ಸರ್ಕಾರದಿಂದ ಒಕ್ಕೂಟಕ್ಕೆ ಹಣ ಬರುತ್ತಿದೆ. ರೈತರಿಂದ ಒಕ್ಕೂಟಕ್ಕೆ ಬರುವ ಎಲ್ಲ ಹಾಲು ಮಾರಾಟ ಆಗುತ್ತಿದೆ ಎಂದರು. ಸಂಘಕ್ಕೆ 170 ದಿನಗಳವರೆಗೆ ಹಾಲು ಹಾಕಿ ಮೃತಪಟ್ಟಂತಹ ಷೇರುದಾರರಿಗೆ ರೈತ ಕಲ್ಯಾಣ ಟ್ರಸ್ಟ್, ಯೋಜನೆಯಡಿಯಲ್ಲಿ ಮೃತಕುಟುಂಬಕ್ಕೆ 15 ಸಾವಿರ ಕೊಡುವ ವ್ಯವಸ್ಥೆ ಇದೆ. ಅದನ್ನು ಎಪ್ರಿಲ್ ನಿಂದ ಇಚೆಗೆ 20 ಸಾವಿರ ರೂ. ಕೊಡುವ ವ್ಯವಸ್ಥೆ ಮಾಡಲಾಗಿದೆ. ಒಕ್ಕೂಟದಲ್ಲಿ ಪಶುವೈದ್ಯರ ಕೊರತೆವಿದೆ. ಒಕ್ಕೂಟವು 80 ಸಾವಿರ ರೂ. ವೇತನ ನೀಡಿ ವೈದ್ಯರನ್ನು ನೇಮಿಸಿಕೊಳ್ಳಲು ಸಿದ್ಧವಿದ್ದೇನೆ. ಪಶುವೈದ್ಯರ ಕೊರತೆಯಾಗಿದೆ' ಎಂದರು. ಸಂಘದ ಅಧ್ಯಕ್ಷ ಎಂ.ಬಸವಣ್ಣ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ ಮಾರ್ಗದ ವಿಸ್ತರಣಾಧಿಕಾರಿ ಹೆಚ್.ಜೆ.ಲಕ್ಷ್ಮೀ, ಸಂಘದ ನಿರ್ದೇಶಕರಾದ ಎಂ.ಶಿವಶಂಕರ್, ಮಲ್ಲು, ಮಹಾದೇವಸ್ವಾಮಿ, ಬಸವರಾಜು, ಶಿವಣ್ಣ, ಚಂದ್ರಮ್ಮ, ಶಾರದಮ್ಮ, ಮುಖ್ಯ ಕಾರ್ಯನಿರ್ವಾಹಕ ಎಸ್.ಚಂದ್ರಶೇಖರಸ್ವಾಮಿ, ಹಾಲುಪರೀಕ್ಷಕ ಎನ್.ಚಿನ್ನಸ್ವಾಮಿ. ಆರ್.ಎಸ್.ಪ್ರತಾಪ್, ಮಹೇಶ್, ಪ್ರಭುಸ್ವಾಮಿ ಸಂಘದ ಸದಸ್ಯರು ಭಾಗವಹಿಸಿದ್ದರು.

# ಕ್ರೀಡೆಯಿಂದ ದೈಹಿಕ ಹಾಗೂ ಮಾನಸಿಕ ಸದೃಢತೆ: ಮೀರಾ ಶಿವಲಿಂಗಯ್ಯ




**ಮಂಡ್ಯ:** ಶಿಕ್ಷಣದಷ್ಟೇ ಕ್ರೀಡೆಯೂ ಇಂದಿನ ಯುವಜನರ ಸರ್ವತೋಮುಖ ಬೆಳವಣಿಗೆಗೆ ಮಹತ್ವದ್ದಾಗಿದೆ. ದೈಹಿಕವಾಗಿ ಸದೃಢರಾಗಿದ್ದಾಗ ಮನಸ್ಸು ಹಾಗೂ ಬುದ್ಧಿ ಚುರುಕಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ತಾಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಲು ಕ್ರೀಡಾಪಟುಗಳಿಗೆ ಉತ್ತಮ ಅವಕಾಶಗಳಿದ್ದು, ನಿರಂತರ ಅಭ್ಯಾಸ, ಶಿಸ್ತು ಮತ್ತು ಪರಿಶ್ರಮದಿಂದ ಕ್ರೀಡಾ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಬಹುದು ಎಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷರಾದ ಮೀರಾ ಶಿವಲಿಂಗಯ್ಯ ಅವರು ತಿಳಿಸಿದರು.

ನಗರದ ಸರ್.ಎಂ. ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ 2026–27ನೇ ಸಾಲಿನ ಮಂಡ್ಯ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರೀಡೆಯನ್ನು ಕೇವಲ ಸಮಯ ಕಳೆಯುವ ಚಟುವಟಿಕೆಯಾಗಿ ಪರಿಗಣಿಸದೆ, ತಮ್ಮ ಪ್ರತಿಭೆ ಹಾಗೂ ಸಾಮರ್ಥ್ಯವನ್ನು ದೇಶದ ಕೀರ್ತಿಗೆ ಬಳಸಿಕೊಳ್ಳುವ ಸಂಕಲ್ಪವನ್ನು ಕ್ರೀಡಾಪಟುಗಳು ಹೊಂದಬೇಕು. ನಿರಂತರ ತರಬೇತಿ ಹಾಗೂ ಕಠಿಣ ಪರಿಶ್ರಮದ ಮೂಲಕ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಉತ್ತಮ ಸಾಧನೆ ಮಾಡುವತ್ತ ಗಮನಹರಿಸಬೇಕು ಎಂದು ಸಲಹೆ ನೀಡಿದರು.

**ಕ್ರೀಡೆಯಲ್ಲಿ ಗೆಲುವು–ಸೋಲು ಸಹಜ:** ತಗ್ಗಹಳ್ಳಿ ವೆಂಕಟೇಶ್ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ಮಾತನಾಡಿ, ನವರಾತ್ರಿ ಹಾಗೂ ದಸರಾ ಹಬ್ಬದ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಕ್ರೀಡಾಕೂಟಗಳನ್ನು ಆಯೋಜಿಸುವುದು ನಮ್ಮ ನಾಡಿನ ಪರಂಪರೆಯಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿರುವ ಕ್ರೀಡಾ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವಲ್ಲಿ ದಸರಾ ಕ್ರೀಡಾಕೂಟ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಕ್ರೀಡೆಯಲ್ಲಿ ಗೆಲುವು ಮತ್ತು ಸೋಲು ಸಹಜ. ಗೆಲುವಿನಷ್ಟೇ ಸೋಲನ್ನೂ ಸಮಾನ ಮನೋಭಾವದಿಂದ ಸ್ವೀಕರಿಸುವುದು ಕ್ರೀಡಾ ಸ್ಫೂರ್ತಿಯ ಲಕ್ಷಣವಾಗಿದೆ. ಕ್ರೀಡಾಪಟುಗಳು ನಿರಂತರ ತರಬೇತಿ ಪಡೆದು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡುವ ಮೂಲಕ ಜಿಲ್ಲೆಗೆ ಕೀರ್ತಿ ತರಬೇಕು ಎಂದು ಹೇಳಿದರು.

**4 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳ ನೋಂದಣಿ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವೈ.ಸಿ. ಮನುಜಶ್ರೀ ಮಾತನಾಡಿ, ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ. ಜಿಲ್ಲೆಯ ಏಳು ತಾಲೂಕುಗಳಲ್ಲಿ ಈಗಾಗಲೇ ತಾಲೂಕು ಮಟ್ಟದ ದಸರಾ ಕ್ರೀಡಾಕೂಟಗಳು ಯಶಸ್ವಿಯಾಗಿ ನಡೆದಿದ್ದು, ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಅರ್ಹ ಕ್ರೀಡಾಪಟುಗಳು ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದಾರೆ ಎಂದರು.

ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ಈಗಾಗಲೇ 4,000ಕ್ಕೂ ಹೆಚ್ಚು ಕ್ರೀಡಾಪಟುಗಳು ನೋಂದಣಿ ಮಾಡಿಕೊಂಡಿದ್ದು, ನೋಂದಣಿ ಪ್ರಕ್ರಿಯೆ ಮುಂದುವರಿದಿದೆ. ಜೂಡೋ, ಹಾಕಿ, ಟೇಕ್ವಾಂಡೋ, ಕರಾಟೆ, ಬ್ಯಾಡ್ಮಿಂಟನ್, ಹ್ಯಾಂಡ್‌ಬಾಲ್ ಹಾಗೂ ವಾಲಿಬಾಲ್ ಸೇರಿದಂತೆ ವಿವಿಧ ಕ್ರೀಡಾ ಸ್ಪರ್ಧೆಗಳು ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣಗಳಲ್ಲಿ ನಡೆಯುತ್ತಿವೆ ಎಂದು ತಿಳಿಸಿದರು.

ಕ್ರೀಡಾಕೂಟದ ಮಾಹಿತಿ ಶಾಲಾ–ಕಾಲೇಜುಗಳು ಹಾಗೂ ಕ್ರೀಡಾಪಟುಗಳಿಗೆ ತಲುಪಿಸುವಲ್ಲಿ ಮಾಧ್ಯಮಗಳ ಸಹಕಾರ ಪ್ರಮುಖವಾಗಿದೆ. ಮಾಧ್ಯಮಗಳು ಹಾಗೂ ವಾಟ್ಸ್‌ಆ?ಯಪ್ ಸೇರಿದಂತೆ ವಿವಿಧ ಸಂವಹನ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಮಾಹಿತಿ ನೀಡಿರುವುದರಿಂದ ನೋಂದಣಿ ಪ್ರಕ್ರಿಯೆ ಉತ್ತಮವಾಗಿ ನಡೆದಿದೆ ಎಂದು ಹೇಳಿದರು.

**ಕ್ರೀಡಾ ಪ್ರತಿಭೆ ಗುರುತಿಸಲು ವೇದಿಕೆ:** ತಾಲೂಕು ದೈಹಿಕ ಶಿಕ್ಷಕರಾದ ಹೂವಯ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯ ಯುವಜನರ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವಿವಿಧ ಕ್ರೀಡಾ ಪಂದ್ಯಾವಳಿಗಳನ್ನು ಆಯೋಜಿಸುತ್ತಿದೆ ಎಂದರು.

ಜಿಲ್ಲೆಯ ಎಲ್ಲ ತಾಲೂಕುಗಳಿಂದ ಆಗಮಿಸಿರುವ ಕ್ರೀಡಾಪಟುಗಳು ಉತ್ಸಾಹದಿಂದ ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿದ್ದು, ಪರಸ್ಪರ ಪ್ರೀತಿ, ಸೌಹಾರ್ದತೆ ಹಾಗೂ ಕ್ರೀಡಾ ಸ್ಫೂರ್ತಿಯಿಂದ ಪಂದ್ಯಾವಳಿಗಳು ನಡೆಯುತ್ತಿವೆ. ಕ್ರೀಡಾಪಟುಗಳಿಗೆ ಅಗತ್ಯ ಮೂಲಸೌಕರ್ಯ ಹಾಗೂ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಯೋಗ ಗುರುಗಳಾದ ಶಿವರುದ್ರಪ್ಪ, ಅಪ್ಪಾಜಿ ಸೇರಿದಂತೆ ವಿವಿಧ ಶಾಲೆಗಳ ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.

# ಕೃಷಿ ಯೋಜನೆಗಳ ಅನುಷ್ಠಾನಕ್ಕೆ ಪಾರದರ್ಶಕತೆಗೆ ಒತ್ತು



**ಮಂಡ್ಯ:** ಜಿಲ್ಲೆಯಲ್ಲಿ ಕೃಷಿ ಇಲಾಖೆಯ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು, ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಸೌಲಭ್ಯಗಳನ್ನು ತಲುಪಿಸುವುದು ಹಾಗೂ ಯೋಜನೆಗಳ ಫಲಿತಾಂಶವನ್ನು ಸಮಗ್ರವಾಗಿ ವಿಶ್ಲೇಷಿಸುವ ನಿಟ್ಟಿನಲ್ಲಿ ತಾಲೂಕುವಾರು ಫಲಾನುಭವಿಗಳ ಮಾಹಿತಿಯನ್ನು ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನಂದಿನಿ ಕೆ.ಆರ್. ರವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್‌ನ ಕೆಸ್ವಾನ್ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನ ಜಿಲ್ಲಾಮಟ್ಟದ ಮೇಲ್ವಿಚಾರಣಾ ಸಭೆ, ಕರ್ನಾಟಕ ರೈತ ಸಮೃದ್ಧಿ ಯೋಜನೆ 2026–27ರ ಜಿಲ್ಲಾಮಟ್ಟದ ಅನುಷ್ಠಾನ ಸಮಿತಿ ಸಭೆ, ಕೃಷಿಭಾಗ್ಯ ಯೋಜನೆ ಹಾಗೂ ಆತ್ಮ ಯೋಜನೆಗೆ ಸಂಬಂಧಿಸಿದ ಜಿಲ್ಲಾಮಟ್ಟದ ಸಮಿತಿಗಳ ಸಭೆಯಲ್ಲಿ ಜಿಲ್ಲಾ ಪಂಚಾಯತ್ ನ ಸಿಇಒ ರವರು ಅಧಿಕಾರಿಗಳಿಗೆ ವಿವಿಧ ಸೂಚನೆಗಳನ್ನು ನೀಡಿದರು.

ತಾಲೂಕುವಾರು ಯೋಜನೆಗಳ ಫಲಾನುಭವಿಗಳ ಮಾಹಿತಿಯನ್ನು ಸಮಗ್ರವಾಗಿ ವಿಶ್ಲೇಷಿಸಿ, ಫಲಾನುಭವಿಗಳ ಪ್ರಸ್ತುತ ಸ್ಥಿತಿ, ಹಣ ಮಂಜೂರಾಗಿರುವ ವಿವರ ಹಾಗೂ ಯೋಜನೆಯಿಂದ ಉಂಟಾಗಿರುವ ಫಲಿತಾಂಶ ಕುರಿತು ಸ್ಪಷ್ಟ ಮಾಹಿತಿ ಸಿದ್ಧಪಡಿಸಬೇಕು. ಪ್ರತಿ ರೈತ ಸಂಪರ್ಕ ಕೇಂದ್ರದಲ್ಲಿ ಇಲಾಖೆಯ ವಿವಿಧ ಯೋಜನೆಗಳು ಹಾಗೂ ಸೌಲಭ್ಯಗಳ ಕುರಿತು ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿ ದೊರೆಯುವಂತೆ ಮಾಹಿತಿ ಪ್ರದರ್ಶನ ಫಲಕ (Display Board) ಅಳವಡಿಸಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆಗಳ ಮಾಹಿತಿ ತಲುಪುವಂತೆ ಕ್ರಮ ಕೈಗೊಂಡು, ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಹೆಚ್ಚಿಸುವುದರ ಜೊತೆಗೆ ಹೆಚ್ಚಿನ ಸಂಖ್ಯೆಯ ಅರ್ಹ ಫಲಾನುಭವಿಗಳು ಸೌಲಭ್ಯ ಪಡೆಯುವಂತಾಗಬೇಕು ಎಂದು ಸೂಚಿಸಿದರು.

ಇಲಾಖೆಯ ವಿವಿಧ ಚಟುವಟಿಕೆಗಳನ್ನು ಕಾರ್ಯಕ್ರಮವಾರು ಹಾಗೂ ಯೋಜನಾವಾರು ಐಇಸಿ ಚಟುವಟಿಕೆಗಳ ಮೂಲಕ ಜನರಿಗೆ ತಲುಪಿಸಬೇಕು. ಯೋಜನೆಗಳ ಉದ್ದೇಶ, ಅರ್ಹತೆ, ಲಭ್ಯವಿರುವ ಸೌಲಭ್ಯ ಹಾಗೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಕುರಿತು ಗ್ರಾಮೀಣ ಮಟ್ಟದಲ್ಲಿ ವ್ಯಾಪಕ ಅರಿವು ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಅಡಿಯಲ್ಲಿ ಬರುವ ಎಲ್ಲಾ ಇಲಾಖೆಗಳ ಯೋಜನೆಗಳ ಅನುಷ್ಠಾನವನ್ನು ವೆಚ್ಚ ಹಾಗೂ ಫಲಿತಾಂಶ ಆಧಾರಿತವಾಗಿ ವಿಶ್ಲೇಷಿಸಿ, ಯಾವ ಯೋಜನೆಯಡಿ ಎಷ್ಟು ಅನುದಾನ ಬಳಕೆಯಾಗಿದೆ, ಎಷ್ಟು ಫಲಾನುಭವಿಗಳಿಗೆ ಪ್ರಯೋಜನ ದೊರೆತಿದೆ ಹಾಗೂ ಯೋಜನೆಯಿಂದ ನಿರೀಕ್ಷಿತ ಫಲಿತಾಂಶ ಸಾಧನೆಯಾಗಿದೆಯೇ ಎಂಬುದನ್ನು ಪರಿಶೀಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರೈತ ಸಲಹಾ ಸಮಿತಿಗಳ ಚಟುವಟಿಕೆಗಳನ್ನು ತಳಮಟ್ಟದಿಂದ ವಿಶ್ಲೇಷಿಸಿ, ರೈತರು ಎದುರಿಸುತ್ತಿರುವ ಸಮಸ್ಯೆಗಳು, ಅಗತ್ಯ ಬದಲಾವಣೆಗಳು ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುತ್ತಿರುವ ಸವಾಲುಗಳನ್ನು ಗುರುತಿಸಿ, ಅವುಗಳಿಗೆ ಪರಿಹಾರ ಕ್ರಮಗಳೊಂದಿಗೆ ಸಮಗ್ರ ವರದಿ ಸಿದ್ಧಪಡಿಸಬೇಕು ಎಂದು ತಿಳಿಸಿದರು.

2026–27ನೇ ಸಾಲಿನ ಪ್ರತಿಯೊಂದು ಯೋಜನೆಯ ಘಟಕವಾರು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ಪ್ರತಿಯೊಂದು ಚಟುವಟಿಕೆಗೆ ಅಂದಾಜು ಕಾಲಮಿತಿ ನಿಗದಿಪಡಿಸಬೇಕು. ಸಂಬಂಧಿಸಿದ ಇಲಾಖೆಗಳು ತಮ್ಮ ಇಲಾಖಾವಾರು ಕ್ರಿಯಾ ಯೋಜನೆ ಹಾಗೂ ಅನುಷ್ಠಾನಕ್ಕೆ ಸಂಬಂಧಿಸಿದ ವಿವರಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಸೂಚಿಸಿದರು.

ಜಿಲ್ಲೆಯಲ್ಲಿ ಉತ್ತಮ ಕೃಷಿ ಪದ್ಧತಿಗಳನ್ನು ಅನುಸರಿಸುತ್ತಿರುವ ರೈತರನ್ನು ತಳಮಟ್ಟದಿಂದ ಗುರುತಿಸಿ, ಅವರ ಉತ್ತಮ ಕೃಷಿ ಪದ್ಧತಿಗಳು ಹಾಗೂ ಯಶಸ್ವಿ ಅನುಭವಗಳನ್ನು ದಾಖಲಿಸಿ, ಇತರೆ ರೈತರಿಗೆ ಮಾದರಿಯಾಗಿ ಪರಿಚಯಿಸುವಂತೆ ತಿಳಿಸಿದರು.

ಜೀವನೋಪಾಯ ಸೇವಾ ಕೇಂದ್ರಗಳ ಮೂಲಕ ಕನಿಷ್ಠ ಒಂದು ಉತ್ಪನ್ನವನ್ನು ಗುರುತಿಸಿ, ಅದನ್ನು ಆಧರಿಸಿದ ಚಟುವಟಿಕೆಯನ್ನು ರೂಪಿಸಿ, ಉತ್ಪನ್ನದ ಗುಣಮಟ್ಟ, ಬ್ರಾಂಡಿಂಗ್ ಹಾಗೂ ಮಾರುಕಟ್ಟೆ ವ್ಯವಸ್ಥೆಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಅದೇ ರೀತಿ, ಪ್ರತಿ ಗ್ರಾಮ ಪಂಚಾಯಿತಿಗೆ ಒಂದು ಬಯೋ–ಇನ್‌ಪುಟ್ ಘಟಕ/ಮಾಡ್ಯೂಲ್ ಕೇಂದ್ರವನ್ನು ಯಶಸ್ವಿಯಾಗಿ ಕಾರ್ಯನಿರ್ವಹಿಸುವ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಸಾಧ್ಯತೆಗಳನ್ನು ಪರಿಶೀಲಿಸಿ, ರೈತರಿಗೆ ಅಗತ್ಯವಿರುವ ಕೃಷಿ ಒಳಸಾಧನಗಳು ಸ್ಥಳೀಯವಾಗಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ, ಕಡತಗಳ ನಿರ್ವಹಣೆ ಹಾಗೂ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಮತ್ತು ಸಮರ್ಪಕ ದಾಖಲೀಕರಣಕ್ಕೆ ಒತ್ತು ನೀಡಬೇಕು . ಪ್ರತಿ ಖಖಏನಲ್ಲಿ ಪೂರ್ವ ಪರಿಶೀಲನೆ, ಅನುಮೋದನೆ, ಕಾಮಗಾರಿ/ ಚಟುವಟಿಕೆ ಅನುಷ್ಠಾನ ಹಾಗೂ ನಂತರದ ಪರಿಶೀಲನೆ ಸೇರಿದಂತೆ ಸಂಪೂರ್ಣ ಪ್ರಕ್ರಿಯೆಯ ಮಾಹಿತಿಯನ್ನು ದಾಖಲಿಸಿ ನಿರ್ವಹಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನದ ಉದ್ದೇಶಗಳು, ರೈತರಿಗೆ ನೀಡಲಾಗುವ ಪ್ರೋತ್ಸಾಹಧನ, ಜಿಲ್ಲಾಮಟ್ಟ ಹಾಗೂ ತಾಲೂಕುಮಟ್ಟದ ಮೇಲ್ವಿಚಾರಣಾ ಸಮಿತಿಗಳ ಕಾರ್ಯವೈಖರಿ ಮತ್ತು ಯೋಜನೆಯ ಪ್ರಗತಿ ವರದಿ ಕುರಿತು ಚರ್ಚಿಸಲಾಯಿತು.

ಕರ್ನಾಟಕ ರೈತ ಸಮೃದ್ಧಿ ಯೋಜನೆ 2026–27ರ ಗುರಿ, ಉದ್ದೇಶ, ವಿವಿಧ ಘಟಕಗಳು, ಜಿಲ್ಲಾಮಟ್ಟದ ಅನುಷ್ಠಾನ ಸಮಿತಿಯ ಕಾರ್ಯ ಹಾಗೂ ಯೋಜನೆಯಡಿ ಕೈಗೊಳ್ಳಬೇಕಾದ ಬ್ರಾಂಡಿಂಗ್ ಮತ್ತು ಮಾರುಕಟ್ಟೆ ಚಟುವಟಿಕೆಗಳ ಕುರಿತು ಪರಿಶೀಲನೆ ನಡೆಸಲಾಯಿತು.

2026–27ನೇ ಸಾಲಿನ ಆತ್ಮ ಯೋಜನೆಯ ಜಿಲ್ಲಾಮಟ್ಟದ ಕ್ರಿಯಾ ಯೋಜನೆ ಹಾಗೂ ಚಟುವಟಿಕೆಗಳ ವಿವರ, ಇಲಾಖಾವಾರು ಕ್ರಿಯಾ ಯೋಜನೆ ಮತ್ತು ಮುಂದಿನ ಹಂತದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಯಿತು.

ಸಭೆಯಲ್ಲಿ ಜಂಟಿ ಕೃಷಿ ನಿರ್ದೇಶಕರಾದ ಜಯಸ್ವಾಮಿ, ಲೀಡ್ ಬ್ಯಾಂಕ್ ಮ್ಯಾನೇಜರ್ ರಾಜೀವ್, ಉಪನಿರ್ದೇಶಕರುಗಳು, ಸಹಾಯಕ ನಿರ್ದೇಶಕರುಗಳು, ಕೃಷಿ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದು, ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಗತಿ ಹಾಗೂ ಕ್ರಮಗಳ ಕುರಿತು ಚರ್ಚಿಸಲಾಯಿತು.

# ಕ್ರೀಡಾ ಸಾಧಕರ ಕೈಪಿಡಿ ಶಾಲಾ ಗ್ರಂಥಾಲಯಕ್ಕೆ




**ಹೊನ್ನಾಳಿ :** ನಗರದ ತುಂಗಭದ್ರಾ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗ್ರಂಥಾಲಯಕ್ಕೆ ಅಂತರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಕ್ರೀಡಾ ಸಾಹಿತಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಡಾ. ಸುಧಾಕರ ಜಿ. ಲಕ್ಕವಳ್ಳಿ ಅವರು ತಾವು ರಚಿಸಿ ಪ್ರಕಟಿಸಿದ ಕರ್ನಾಟಕ ಕ್ರೀಡಾ ಸಾಧಕರು ಕೃತಿಯನ್ನು ಉಚಿತವಾಗಿ ಕೊಡುಗೆಯಾಗಿ ನೀಡಿದರು.

ಪುಸ್ತಕ ಸ್ವೀಕರಿಸಿ ಮಾತನಾಡಿದ ಮುಖ್ಯ ಶಿಕ್ಷಕಿ ಶ್ರೀಮತಿ ಗೀತಾ ಅವರು, ಸ್ವತಃ ಕ್ರೀಡಾ ಶಿಕ್ಷಕರೇ ಸಾಧಕರ ಪರಿಚಯದಂತಹ ಅಮೂಲ್ಯ ಕೃತಿ ರಚಿಸಿ, ಅದನ್ನು ಸರ್ಕಾರಿ ಶಾಲೆಗಳ ಮಕ್ಕಳ ಜ್ಞಾನದಾಹ ತಣಿಸಲು ಉಚಿತವಾಗಿ ನೀಡುತ್ತಿರುವುದು ನಿಜಕ್ಕೂ ಅನುಕರಣೀಯ ಹಾಗೂ ಶ್ಲಾಘನೀಯ ಕಾರ್ಯ. ಈ ಪುಸ್ತಕ ಮಕ್ಕಳಲ್ಲಿ ಕ್ರೀಡಾ ಸ್ಫೂರ್ತಿಯ ಕಿಡಿ ಹೊತ್ತಿಸಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾದ ನಿಜಲಿಂಗೇಶ್, ಗುರುಸ್ವಾಮಿ ಹಾಗೂ ಶಾಲೆಯ ಸಹಶಿಕ್ಷಕರು ಉಪಸ್ಥಿತರಿದ್ದರು.



**ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ. ಲೋಕನಾಥ್ ಎನ್ .ಕೆ. ಅವರಿಂದ ಡಾಕ್ಟರೇಟ್ ಪದವಿ ಸ್ವೀಕರಿಸಿದ ಯಾಚೇನಹಳ್ಳಿ ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಟ್ರಸ್ಟ್ ಸಂಸ್ಥೆಯ ಧರ್ಮದರ್ಶಿ, ಗಾಯಕರು, ವಾಗ್ಮಿಗಳು, ಕೆಐಎಡಿಬಿ ಕಾರ್ಯದರ್ಶಿಯೂ ಆದ ಡಾ. ಮಹೇಶ್ ವಿ.ಎಚ್. ರವರಿಗೆ ಎಂಆರ್ ಎಂ ಪ್ರಕಾಶನ ಹಾಗೂ ಸ್ಕಿಲ್ ಫರ್ನ್ ಮಲ್ಟಿಮೀಡಿಯ ಸಂಸ್ಥೆ ವತಿಯಿಂದ ತುಂಬು ಹೃದಯದ ಅಭಿನಂದನೆಗಳು.**

# ಕೌದಿ ಏಕವ್ಯಕ್ತಿ ನಾಟಕ ಪ್ರದರ್ಶನ ಇಂದು

**ಮೈಸೂರು:** ಚಾರು ಸಾಂಸ್ಕೃತಿಕ ಪ್ರತಿಷ್ಠಾನವು 'ಕೌದಿ' ಏಕವ್ಯಕ್ತಿ ನಾಟಕ ಪ್ರದರ್ಶನವನ್ನು ಸೆಪ್ಟೆಂಬರ್ 20ರಂದು ಭಾನುವಾರ ಸಂಜೆ 6 ಗಂಟೆಗೆ ನಗರದ ವರ್ತುಲ ರಸ್ತೆಯ ಎಸ್ ಬಿಎಂ ಮತ್ತು ಇತರ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆಯ 208 ಚಾರುಮನೆಯಲ್ಲಿ ಏರ್ಪಡಿಸಲಾಗಿದೆ.

ಗಣೇಶ ಅಮೀನಗಡ ರಚನೆಯ ಈ ನಾಟಕವನ್ನು ಕಲಬುರಗಿಯ ಭಾಗ್ಯಶ್ರೀ ಬಿ. ಪಾಳಾ ಪ್ರಸ್ತುತಪಡಿಸುವರು. ಈ ನಾಟಕದ ಸಂಗೀತ, ವಿನ್ಯಾಸ, ನಿರ್ದೇಶನ ಜಗದೀಶ್ ಆರ್.ಜಾಣಿ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿರುವ ಈ ನಾಟಕಕ್ಕೆ ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ನಿರ್ಮಲಾ ಮಠಪತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಭಾಗವಹಿಸುವರು.

ಒಂದು ಗಂಟೆ ಅವಧಿಯ ಈ ನಾಟಕಕ್ಕೆ ಉಚಿತ ಪ್ರವೇಶವಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ಬರಬೇಕೆಂದು ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಡಿ.ಶೀಲಾಕುಮಾರಿ ಕೋರಿದ್ದಾರೆ.

ಮಾಹಿತಿಗೆ ಮೊ.8971144897/ 8310044631/8861427629 ಸಂಪರ್ಕಿಸಬಹುದು.




# ಹರಿಕಥಾಮೃತಸಾರದ ಕರ್ತೃ ಜಗನ್ನಾಥದಾಸರ ಆರಾಧನೆ

**ಇಂದು ಜಗನ್ನಾಥದಾಸರ ಆರಾಧನೆ.ದಾಸ ಸಾಹಿತ್ಯದಲ್ಲಿ ವಿಶೇಷವಾಗಿ ಕನ್ನಡ ಭಾಷೆಯಲ್ಲಿ ಜಗನ್ನಾಥದಾಸರ ಕೊಡುಗೆ ಬಹುದೊಡ್ಡದು ಹಾಗೂ ಅನನ್ಯವಾದುದು. ಇವರ ಮೇರು ಕೃತಿ ಹರಿಕಥಾಮೃತಸಾರ. ಇದರ ಜೊತೆಗೆ ತತ್ವಸುವ್ವಾಲಿ, ಬಲು ರಮ್ಯವಾಗಿದೆ ಶ್ರೀಹರಿಯ ಮಂಚ, ಅತಿ ಶೋಭಿಸುತಿದೆ ಶ್ರೀಪತಿಯ ವಾಹನ, ಫಲವಿದ್ದು ಬಾಳ್ದುದಕೆ, ಬಾರವ್ವ ಮಹಾಭಾಗ್ಯದಭಿಮಾನಿ ಮತ್ತು ವೃಂದಾವನಗಳಿಗಾನಮಿಸಿ ನಿತ್ಯ, ಸೇರಿದಂತೆ ಅನೇಕ ಕೀರ್ತಿಗಳನ್ನು ಜಗನ್ನಾಥವಿಠಲ ಎಂಬ ಅಂಕಿತದಿಂದ ರಚಿಸಿದ್ದಾರೆ.**



| ಕಾವೇರಿ ಭಾರದ್ವಾಜ್

ಕನ್ನಡ ಸಾಹಿತ್ಯದಲ್ಲಿ ದಾಸ ಸಾಹಿತ್ಯವೇ ವಿಶಿಷ್ಟವಾದ ಒಂದು ಪ್ರತ್ಯೇಕ ಪ್ರಕಾರ. ಇಡೀ ದಾಸ ಸಾಹಿತ್ಯದಲ್ಲಿ ಭಕ್ತಿಯ ಪಂಥವೇ ಮುಖ್ಯಾಂಶ. ಅನೇಕ ದಾಸರು ದೇವರನಾಮಗಳನ್ನು ಕೊಡುಗೆಯಾಗಿ ನೀಡಿ ದಾಸ ಸಾಹಿತ್ಯವನ್ನು ಬಹುಶ್ರೀಮಂತಗೊಳಿಸಿದ್ದಾರೆ. ಈ ದಾಸರ ಪಟ್ಟಿಯಲ್ಲಿ ಸೇರುವ ಜಗನ್ನಾಥ ದಾಸರು ಒಬ್ಬ ಶ್ರೇಷ್ಠ ದಾಸರು.



ಜಗನ್ನಾಥದಾಸರು ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಬ್ಯಾಗವಟ್ಟಿ ಗ್ರಾಮದಲ್ಲಿ ಜನಿಸಿದರು. ತಂದೆ ನರಸಿಂಹದಾಸ, ತಾಯಿ ಲಕ್ಷ್ಮಮ್ಮ. ಇವರ ಮೂಲ ಹೆಸರು ಶ್ರೀನಿವಾಸ. ಇವರು ಮಂತ್ರಾಲಯದಲ್ಲಿ ಸಂಸ್ಕೃತ ಅಧ್ಯಯನ ನಡೆಸಿದರು. ಇವರ ಗುರುಗಳು ಗೋಪಾಲದಾಸರು. ಇವರು ಶ್ರೀನಿವಾಸರಿಗೆ ಹರಿದಾಸ ದೀಕ್ಷೆಯನ್ನು ನೀಡಿದರು ಎಂಬ ಪ್ರತೀತಿ ಇದೆ. ತಮ್ಮ ಆಯಸ್ಸಿನಲ್ಲಿ 40 ವರ್ಷಗಳನ್ನು ಶಿಷ್ಯರಿಗೆ ಆಯುರ್ದಾನ ಮಾಡಿದರೆಂಬುದು ನಂಬಿಕೆ. ಪಂಡಾರಾಪುರದಲ್ಲಿ ಪಾಂಡುರಂಗನ ಅನುಗ್ರಹದಿಂದ ಜಗನ್ನಾಥ ವಿಠಲ ಎಂಬ ಅಂಕಿತವನ್ನು ಪಡೆದು ಜಗನ್ನಾಥದಾಸರಾದರು.

ಮುಂದೆ ತಮ್ಮ ಆಚಾರ್ಯರ ಆಜ್ಞೆಯ ಮೇರೆಗೆ, ಗ್ರಂಥ ರಚನೆ, ಧರ್ಮ ಪ್ರಚಾರ, ಭಕ್ತಿ ಮಾರ್ಗದಲ್ಲಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡರು. ಇವರ ಹರಿಕಥಾಮೃತಸಾರ ಕನ್ನಡ ದಾಸ ಸಾಹಿತ್ಯದ ಬಹುಮೇರು ಕೃತಿಯಾಗಿದೆ. ಇದರ ಜೊತೆಗೆ ಸಾಕಷ್ಟು ದೇವರನಾಮಗಳನ್ನು ಮತ್ತು ತತ್ವಸುವ್ವಾಲಿಯನ್ನು ರಚಿಸಿದ್ದಾರೆ. ಇವರು ಭಾಗವತ ಧರ್ಮಕ್ಕೆ ನವಚೈತನ್ಯ ನೀಡಿದ ಮಹಾಪುರುಷರು. ಇವರು ದಾಸ ಚತುಷ್ಟಯರಲ್ಲಿ ಒಬ್ಬರಾಗಿದ್ದಾರೆ.

**ಹರಿಕಥಾಮೃತಸಾರ:** ಜಗನ್ನಾಥದಾಸರ ಬಹು ಖ್ಯಾತಿಯ ಹರಿಕಥಾಮೃತಸಾರ ಕನ್ನಡ ದಾಸ ಸಾಹಿತ್ಯದಲ್ಲೇ ವಿಶೇಷವಾದ ಮತ್ತು ಶ್ರೇಷ್ಠವಾದ ಮೇರು ಕೃತಿ. ವ್ಯಾಸರಾಯರ ಸ್ವಪ್ನಾದೇಶದಿಂದ ರಚಿಸಿರುವ ಈ ಕೃತಿ ದ್ವೈತ ಸಿದ್ಧಾಂತದ ವಿದ್ವತ್ಪೂರ್ಣ ಕೈಪಿಡಿ. ಶ್ರೀಹರಿಯ ಕಲ್ಯಾಣ ಗುಣಗಳನ್ನು ದಾಸರು ಈ ಗ್ರಂಥದಲ್ಲಿ ಬಹಳ ಸರಳವಾಗಿ ಮತ್ತು ಸುಲಲಿತವಾಗಿ ವರ್ಣಿಸಿದ್ದಾರೆ. ಇದರಲ್ಲಿ ಮೋಕ್ಷಸಾಧನೆ, ಭಕ್ತಿಯ ಉಪಾಸನಾ ತತ್ವಗಳನ್ನು ಕಾವ್ಯಮಯವಾಗಿ ದಾಸರು ರಚಿಸಿದ್ದಾರೆ. ಈ ಕೃತಿಯಲ್ಲಿ ಒಟ್ಟು 32 ಸಂಧಿಗಳಿದ್ದು, 900ಕ್ಕೂ ಅಧಿಕ ಪದ್ಯಗಳನ್ನು ಹೊಂದಿದೆ. ವೇದ, ಉಪನಿಷತ್ತು ಹಾಗೂ ಗೀತಾ ಸಾರವನ್ನು ಒಳಗೊಂಡಿದ್ದು, ದ್ವೈತ ಸಿದ್ಧಾಂತ, ಜ್ಞಾನ, ಭಕ್ತಿ ಮತ್ತು ವೈರಾಗ್ಯವನ್ನು ಪ್ರತಿಪಾದಿಸುತ್ತದೆ. ಆರಂಭದಲ್ಲಿ ನರಸಿಂಹ ದೇವರ ಸ್ತುತಿ ಹಾಗೂ ಗುರುಗಳಾದ ವ್ಯಾಸತೀರ್ಥರಿಗೆ ನಮಿಸಿ ಕೃತಿಯನ್ನು ಪ್ರಾರಂಭಿಸಲಾಗಿದೆ.



ಈ ಕೃತಿ ಅದೆಷ್ಟೋ ಸುಮಧುರ ಕಂಠಗಳಿಂದ ರಾಗಮಯವಾಗಿ ಹಾಡಲ್ಪಟ್ಟಿದೆ. ಭಾಮಿನಿ ಷಟ್ಪದಿಯಲ್ಲಿ ಛಂದೋಬದ್ಧವಾಗಿ ರಚನೆಯಾಗಿರುವ ಹರಿಕಥಾಮೃತಸಾರ ಕವಿತಾಕೌಶಲ್ಯಕ್ಕೆ ಉತ್ತಮ ಉದಾಹರಣೆಯಾಗಿದೆ.

ಈ ಕುರಿತು ವಿದ್ವನ್ಮಣಿ ವ್ಯಾಸನ ಕೆರೆ ಪ್ರಭಂಜನಾಚಾರ್ಯರು ಹೇಳಿರುವಂತೆ, "ಹರಿಕಥಾಮೃತಸಾರವು ಆಸ್ತಿಕರಿಗೆ ದಾಸರು ನೀಡಿರುವ ಮಣಿಖಚಿತ ಹರಿವಾಣದ ಸುಗ್ರಾಸ ಭೋಜನ" ಎಂದು ಉಲ್ಲೇಖಿಸಿದ್ದಾರೆ. ಇದು ಸಾತ್ವಿಕರಿಗೆ ಅನರ್ಘ್ಯರತ್ನ. ದ್ವೈತ ವೇದಾಂತದ ಪ್ರಮೇಯಕೋಶವೆಂದೂ ಹೇಳಲಾಗಿದೆ. ಇದು ದಾಸ ಸಾಹಿತ್ಯ, ವ್ಯಾಸ ಸಾಹಿತ್ಯಗಳ ಸಾರಸರ್ವಸ್ವ ಹೊಂದಿರುವ ಮೇರುಕೃತಿ ಎಂಬುದು ಮಹನೀಯರ ಅಭಿಪ್ರಾಯ.



**ರಂಗೋಲಿದಾಸರು:** ಜಗನ್ನಾಥದಾಸರು ಬಹಳ ಸುಂದರವಾಗಿ ಹಾಗೂ ಆಕರ್ಷಕವಾಗಿ ರಂಗೋಲಿ ಬಿಡಿಸುವ ಕಲೆಯನ್ನು ಹೊಂದಿದ್ದ ಕಾರಣ ಅವರನ್ನು ಎಲ್ಲರೂ ಬಹಳ ಪ್ರೀತಿ ಮತ್ತು ಗೌರವದಿಂದ ರಂಗೋಲಿ ದಾಸರು ಎಂದು ಕರೆಯುತ್ತಿದ್ದರು. ರಂಗೋಲಿ ಕಲೆಯನ್ನು ಭಕ್ತಿಯಲ್ಲಿ ಬೆರೆಸಿ ಹರಿಯ ಕೀರ್ತನೆಗಳನ್ನು ಹಾಡುತ್ತಾ ನೆಲದ ಮೇಲೆ ಸುಂದರವಾದ ರಂಗೋಲಿಗಳನ್ನು ಬಿಡಿಸುತ್ತಿದ್ದರು.ಅವು ಕೇವಲ ಸುಂದರ ಮತ್ತು ಆಕರ್ಷಕ ಮಾತ್ರವಲ್ಲದೆ? ಭಕ್ತಿಪೂರ್ವಕವಾಗಿರುತ್ತಿದ್ದವು ಎಂಬ ಪ್ರತೀತಿಯಿದೆ.

**ಹರಿದಾಸರೆಂದರೆ ಯಾರು?:** ಹರಿದಾಸರ ಕುರಿತು ಜಗನ್ನಾಥದಾಸರು, ನೀಚ ಜನರಲ್ಲಿ ಯೋಚಿಸದೇ, ನಾಳೆಗೇನೆಂದು ಯೋಚಿಸದೇ, ಶ್ರೀಹರಿಯೇ ಮೋಚಕನಂದು ತಿಳಿದು, ಅಚ್ಯುತನ ಪಾದಗಳನ್ನು ಅರ್ಚಿಸಿ ಮೆಚ್ಚಿಸುವವರು. ಲೌಕಿಕ ಜಗತ್ತಿನ ವ್ಯಾಮೋಹವನ್ನು ಸಂಪೂರ್ಣವಾಗಿ ತೊರೆದು ಪರಮಾತ್ಮನಿಗೆ ತಮ್ಮನ್ನು ಅರ್ಪಿಸಿಕೊಂಡವರು. ಸದಾ ಎಚ್ಚರ ತಪ್ಪದವರು,ತುಚ್ಛ ವಿಷಯಗಳಲ್ಲಿ ಆಸಕ್ತಿ ತೋರದವರು, ಹೃದಯದಲ್ಲಿ ಹರಿಯ ರೂಪ, ವದನದಲ್ಲಿ ಅವನ ನಾಮ, ಉದರದಲ್ಲಿ ಅವನ ಪ್ರಸಾದ, ಶಿರದಲ್ಲಿ ನಿರ್ಮಾಲ್ಯ ತೀರ್ಥವನ್ನು ಹೊಂದಿದವರು. ಪಾತ್ರರ ಸಂಗ ಯಾತ್ರೆ ಮಾಡುತ್ತಾ, ಪರಮಾತ್ಮನ ಸ್ಮರಿಸುವವರು. ಬಿಗಿದ ಕಂಠದಿಂದ ಆನಂದ ಬಾಷ್ಪಗಳನ್ನು ಸುರಿಸುತ್ತಾ ನಗುಮುಖದಲ್ಲಿ ಪರಮಾತ್ಮನನ್ನು ಅವನ ಲೀಲೆಗಳನ್ನು ಹಾಡಿ ಹೊಗಳುವವರು ಎಂದಿದ್ದಾರೆ.

# ಆತಂಕವಿದ್ದರೆ ಆಯುಷ್ಯ ಕ್ಷೀಣ



ಆತಂಕವು ಅಂತರಂಗವನ್ನು ಕೊರೆಯುವ ಅದೃಶ್ಯ ಗೆದ್ದಲು. ಭೀತಿಯ ಸುಳಿವು ದೊರಕಿದೊಡನೆ ಮೆದುಳಿನ ಅಮಿಗ್ಡಲಾ ಎಚ್ಚೆತ್ತು ರಕ್ತಸಿರಗಳಲ್ಲಿ ಅಡ್ರಿನಲಿನ್ ಪ್ರವಾಹವನ್ನು ಚಿಮ್ಮಿಸುತ್ತದೆ. ಕ್ಷಣಾರ್ಧದಲ್ಲಿ ಹೃದಯಬಡಿತ ಉಲ್ಬಣಿಸಿ, ಶರ್ಕರೆ ಮಟ್ಟ ಜಿಗಿಯುತ್ತದೆ. ಈ ಅವಸ್ಥೆ ನಿರಂತರವಾದರೆ ಎದೆ ಬಳಲುತ್ತದೆ, ಜಠರಾಗ್ನಿ ತಣ್ಣಗಾಗುತ್ತದೆ, ಚರ್ಮ ಅಕಾಲದಲ್ಲಿ ಮುದುಡುತ್ತದೆ. ಹೀಗೆ ಅವಿರತ ಚಿಂತನೆಯು ಆಯುಷ್ಯದ ಶಕ್ತಿಕೋಶವನ್ನು ಮೆಲ್ಲನೆ ಬರಿದು ಮಾಡುತ್ತದೆ.

ಒಬ್ಬರ ಉದ್ವಿಗ್ನತೆಯು ಗೃಹದಿಂದ ಗ್ರಾಮಕ್ಕೆ ಹರಡುವ ಸಾಂಕ್ರಾಮಿಕ. ಜನಕನ ಲಲಾಟದ ಸುಕ್ಕು ಮಗುವಿನ ಪಾಠಶಾಲಾ ಹುರುಪನ್ನು ಕಸಿಯುತ್ತದೆ, ವ್ಯಾಪಾರಿಯ ಚಡಪಡಿಕೆಯು ಸರತಿಯಲ್ಲಿರುವವರ ಮುಗುಳ್ನಗೆಯನ್ನು ಮಂಕಾಗಿಸುತ್ತದೆ, ವಾಹನದಲ್ಲಿನ ಏಕ ವ್ಯಕ್ತಿಯ ಅಸಹನೆಯು ಸಹಪ್ರಯಾಣಿಕರ ಆಹ್ಲಾದವನ್ನು ಹಾಳುಮಾಡುತ್ತದೆ. ಹೀಗೆ ಒಂದು ಮನದ ಅಶಾಂತಿಯು ಹಲವು ಹೃದಯಗಳ ಕಾಂತಿಯನ್ನು ಆರಿಸುತ್ತದೆ.

ಇದರ ನಿವಾರಣೆಗೆ ಕಠೋರ ಸಾಧನೆ ಬೇಕಿಲ್ಲ. ಹೆದರಿಕೆ ಮುತ್ತಿದಾಗ ಕರತಲಗಳನ್ನು ಶೀತಲ ಜಲದಲ್ಲಿ ಅದ್ದಿ ತಂಪನ್ನು ಆಸ್ವಾದಿಸಿ. ದಿನಕ್ಕೆ ಮೂರು ಬಾರಿ ಅಂಸಗಳನ್ನು ಮೇಲಕ್ಕೆತ್ತಿ ಮೆಲ್ಲನೆ ಇಳಿಸಿ, ಗ್ರೀವದ ಬಿಗುವನ್ನು ಸಡಿಲಿಸಿ. ಕಾಡುವ ಯೋಚನೆಯನ್ನು ಪತ್ರದಲ್ಲಿ ಬರೆದು ಪೆಟ್ಟಿಗೆಯಲ್ಲಿ ಇಡಿ, ಸಪ್ತಾಹದ ನಂತರ ನೋಡಿದರೆ ಬಹುತೇಕ ವ್ಯಥೆಗಳು ತಾವಾಗಿಯೇ ಲೀನವಾಗಿರುತ್ತವೆ.

ಆತಂಕದ ತೆರೆ ಸರಿದರೆ ಜೀವನ ಪಥ ಹಸಿರಾಗುತ್ತದೆ. ನಾಳಿನ ಜಂಜಡವನ್ನು ಬದಿಗಿಟ್ಟು ಇಂದಿನ ಕಾರ್ಯವನ್ನು ಪ್ರೀತಿಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿ. ನೆಮ್ಮದಿಯ ಅಂತರಾಳವೇ ದೇವಾಲಯ, ಅಲ್ಲಿ ಸಂತಸವೇ ದೈವ. ಆತಂಕವನ್ನು ಬಾಗಿಲಲ್ಲೇ ನಮಸ್ಕರಿಸಿ ಕಳಿಸಿದರೆ ಆಯುಷ್ಯ ದೀರ್ಘವಾಗುತ್ತದೆ.

ಅಂಕಣ-26
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಕುಟುಂಬವೆಂಬ ಸಾಮ್ರಾಜ್ಯದ ಅಘೋಷಿತ ರಾಣಿ: ಹೆಂಡತಿಯೆಂಬ ಸಕಲ ಕಲಾ ವಲ್ಲಭೆ !



| ಸ್ವಾಮಿನಾಥನ್
ಮೊ:9880041516

ಸೆಪ್ಟೆಂಬರ್ 20 ರಂದು Wife Appreciation Day ಆಚರಿಸಲಾಗುತ್ತದೆ. ಹೆಂಡತಿಗೆ ಕೃತಜ್ಞತೆ ಮತ್ತು ಮೆಚ್ಚುಗೆ ವ್ಯಕ್ತಪಡಿಸಲು ಒಂದು ದಿನ ಮೀಸಲಿಡುವುದು ಒಳ್ಳೆಯ ಯೋಚನೆ . ಆದರೆ ನಿಜ ಹೇಳಬೇಕೆಂದರೆ, ಮನೆಯೊಡತಿಯ ಕೊಡುಗೆಯನ್ನು ನೆನಪಿಸಿಕೊಳ್ಳಲು ಒಂದು ದಿನ ಸಾಕೇ

ಕಾರ್ಪೊರೇಟ್ ಜಗತ್ತಿನಲ್ಲಿ ಮಲ್ಟಿಟಾಸ್ಕಿಂಗ್ ಎಂಬ ಪದ ಬಹಳ ಜನಪ್ರಿಯ. ಒಂದೇ ಸಮಯದಲ್ಲಿ ಹಲವು ಕೆಲಸಗಳನ್ನು ನಿರ್ವಹಿಸುವ ಸಾಮರ್ಥ್ಯವೇ ಮಲ್ಟಿಟಾಸ್ಕಿಂಗ್ ಎಂದು ನಾವು ಹೇಳುತ್ತೇವೆ. ಉದ್ಯೋಗ ಕ್ಷೇತ್ರದಲ್ಲಿ ಇದೊಂದು ದೊಡ್ಡ ಕೌಶಲ್ಯ. ಆದರೆ ಈ ಕೌಶಲ್ಯವನ್ನು ಯಾವುದೇ ತರಬೇತಿ, ಪ್ರಮಾಣಪತ್ರ ಅಥವಾ ಸಂಬಳವಿಲ್ಲದೆ ವರ್ಷಗಳಿಂದ ಅಭ್ಯಾಸ ಮಾಡುತ್ತಿರುವ ಒಬ್ಬಳು ಇದ್ದಾಳೆ ಅವಳು ಮನೆಯ ಹೆಂಡತಿ!

ಬೆಳಿಗ್ಗೆ ಮಕ್ಕಳನ್ನು ಎಬ್ಬಿಸುವುದರಿಂದ ಅವಳ ದಿನಚರಿ ಆರಂಭ. ಅಡುಗೆ ಮಾಡುತ್ತಾ ಮಕ್ಕಳ ಶಾಲೆಯ ಸಿದ್ಧತೆ, ಗಂಡನ ಊಟದ ಡಬ್ಬಿ, ಮನೆಯ ಖರ್ಚಿನ ಲೆಕ್ಕ, ಹಿರಿಯರ ಔಷಧಿ, ಮನೆಗೆ ಬೇಕಾದ ವಸ್ತುಗಳ ಪಟ್ಟಿ ಒಂದು ಕೆಲಸ ಮುಗಿಯುವ ಮೊದಲೇ ಮತ್ತೊಂದು ಕೆಲಸ ಬಾಗಿಲು ತಟ್ಟುತ್ತಿರುತ್ತದೆ. ಆದರೂ ಎಲ್ಲವನ್ನೂ ಒಂದರೊಳಗೆ ಮತ್ತೊಂದು ಜೋಡಿಸಿ ಸಾಗಿಸುವ ಅವಳ ಸಾಮರ್ಥ್ಯ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ.

ಜಗತ್ತಿನ ಎಂಟನೇ ಅದ್ಭುತ ಯಾವುದು ಎಂದು ಯಾರಾದರೂ ಕೇಳಿದರೆ, ತಲೆ ಕೆಡಿಸಿ ಕೊಂಡು ಯೋಚಿಸಬೇಕಾಗಿಲ್ಲ; ನೇರವಾಗಿ ನಿಮ್ಮ ಮನೆಯ ಕಡೆಗೆ ಬೆರಳು ತೋರಿಸಿ. ಅಲ್ಲಿ ಮನೆಯೊಡತಿ ಎಂಬ ಹೆಸರಿನಲ್ಲಿ ಒಬ್ಬಳು ಮಹಿಳೆ ಇರುತ್ತಾಳೆ. ಅವಳೇ ಈ ಜಗತ್ತಿನ ಅತಿದೊಡ್ಡ ಅದ್ಭುತ!

ಒಬ್ಬ ಹೆಂಡತಿ ತನ್ನ ಜೀವಮಾನದಲ್ಲಿ ನಿರ್ವಹಿಸುವ ಪಾತ್ರಗಳನ್ನು ನೋಡಿದರೆ, ಒಬ್ಬ ಸಾಮಾನ್ಯ ಮನುಷ್ಯನಿಗೆ ತಲೆ ತಿರುಗುವುದು ಖಂಡಿತ. ಅವಳು ಕೇವಲ ಸಂಗಾತಿಯಲ್ಲ; ಅಡುಗೆಗಾರ್ತಿಯಿಂದ ಹಣಕಾಸು ನಿರ್ವಾಹಕಿಯವರೆಗೆ, ಶಿಕ್ಷಕಿಯಿಂದ ಸಲಹೆಗಾರ್ತಿಯವರೆಗೆ, ಆರೋಗ್ಯದ ಕಾಳಜಿಯಿಂದ ಮನೆಯ ವ್ಯವಸ್ಥೆಯವರೆಗೆ ಹತ್ತಾರು ಪಾತ್ರಗಳನ್ನು ಒಂದೇ ಸಮಯದಲ್ಲಿ ನಿರ್ವಹಿಸುವ ಬಹುರೂಪಿ ಪ್ರತಿಭೆ.

ಹಾಗಾದರೆ, ಈ ಮನೆಯ ಮಲ್ಟಿಟಾಸ್ಕಿಂಗ್ ಕ್ವೀನ್ ನ ಕೆಲವು ಅವತಾರಗಳನ್ನು ನೋಡೋಣ!




ಅಡುಗೆಮನೆಯ ಆಲ್ಕೆಮಿಸ್ಟ್ ಮತ್ತು ಮಾಸ್ಟರ್ ಚೆಫ್

ಹೆಂಡತಿಯ ದಿನಚರಿ ಆರಂಭವಾಗುವುದೇ ಅಡುಗೆಮನೆಯಲ್ಲಿ. ಅವಳ ಕೈಯಲ್ಲಿರುವ ಸೌಟು ಕೇವಲ ಅಡುಗೆ ಮಾಡುವ ಸಾಧನವಲ್ಲ; ಅದು ಒಂದು ಮ್ಯಾಜಿಕ್ ವಾಂಡ್!

ಫ್ರಿಡ್ಜ್‌ನಲ್ಲಿ ಏನೂ ಇಲ್ಲದಿದ್ದರೂ, ಹತ್ತೇ ನಿಮಿಷದಲ್ಲಿ ಘಮಘಮಿಸುವ ಉಪ್ಪಿಟ್ಟು ಅಥವಾ ಚಿತ್ರಾನ್ನ ಸಿದ್ಧಪಡಿಸುವ ಅವಳ ಕಲೆಗೆ ದೊಡ್ಡ ಪ್ರಶಸ್ತಿಯೇ ನೀಡಬೇಕು. ಇನ್ನು ಅವಳು ಮಾಡುವ ಪ್ರತಿಯೊಂದು ಪದಾರ್ಥಕ್ಕೂ ಇದು ಆರೋಗ್ಯಕ್ಕೆ ತುಂಬಾ ಒಳ್ಳೆಯದು ಎಂಬ ಟ್ಯಾಗ್‌ಲೈನ್ ಇದ್ದೇ ಇರುತ್ತದೆ. ದಿಡೀರ್ ಅಂತ ಹತ್ತು ಜನ ಊಟಕ್ಕೆ ಬಂದ್ರೂ ಸಹ ಲಗುಬಗೆಯಿಂದ ಏನೋ ಹೊಂದಿಸಿ ತೃಪ್ತಿಯಾಗಿ ಬಡಿಸಿ ಆನಂದ ಪಡುವವಳು ಹೆಂಡತಿ ಅರ್ಥಾತ್ ಮನೆಯ ಒಡತಿ .

ನಿಮಗೆ ಇಷ್ಟವಿಲ್ಲದಿದ್ದರೂ, ಸ್ವಲ್ಪ ತಿನ್ನಿ ನೋಡಿ ಎಂಬ ಪ್ರೀತಿಯ ಒತ್ತಾಯದ ಮುಂದೆ ಕೊನೆಗೆ ಅದು ಅಮೃತವೇ ಆಗಿಬಿಡುತ್ತದೆ!

ಮನೆಯ ಹಣಕಾಸು ಸಚಿವೆ : ಮನೆಯ ಆರ್ಥಿಕ ವ್ಯವಸ್ಥೆಯನ್ನು ಸಮತೋಲನದಲ್ಲಿಡುವಲ್ಲಿ ಹೆಂಡತಿಯ ಪಾತ್ರ ವಿಶಿಷ್ಟ. ಸಂಬಳ ಬಂದ ದಿನದಿಂದ ತಿಂಗಳ ಕೊನೆಯವರೆಗೆ ಖರ್ಚುಗಳನ್ನು ಹೇಗೆ ನಿಭಾಯಿಸಬೇಕು, ಯಾವುದು ಅಗತ್ಯ, ಯಾವುದನ್ನು ಮುಂದೂಡಬಹುದು ಎಂಬ ಲೆಕ್ಕಾಚಾರ ಅವಳ ತಲೆಯಲ್ಲೇ ಸಿದ್ಧವಾಗಿರುತ್ತದೆ.

ತಿಂಗಳ ಕೊನೆಯಲ್ಲಿ ಗಂಡನ ಜೇಬು ಹಗುರವಾದರೂ, ಮನೆಯ ವ್ಯವಸ್ಥೆ ಮಾತ್ರ ಹಗುರವಾಗುವುದಿಲ್ಲ. ಎಲ್ಲೋ ಒಂದು ಕಡೆ ಉಳಿಸಿದ ಹಣ, ಜಾಣ್ಮೆಯಿಂದ ಮಾಡಿದ ಖರೀದಿ, ಅನಗತ್ಯ ಖರ್ಚಿಗೆ ಹಾಕಿದ ಬ್ರೇಕ್, ಇವೆಲ್ಲ ಅವಳ ಬಜೆಟ್ ಪ್ಲಾನಿಂಗ್‌ನ ಫಲ! ಅವಳ ಹಣಕಾಸಿನ ನಿರ್ವಹಣೆಯ ಮುಂದೆ ದೊಡ್ಡ ದೊಡ್ಡ ಎಕನಾಮಿಕ್ಸ್ ಪ್ರೊಫೆಸರ್‌ಗಳಿಗೂ ಒಂದು ಸಲ ಟ್ಯೂಷನ್ ತೆಗೆದುಕೊಳ್ಳಬೇಕೆನಿಸಬಹುದು!

ಶೈಕ್ಷಣಿಕ ಮಾರ್ಗದರ್ಶಿ ಮತ್ತು ಕಟ್ಟುನಿಟ್ಟಿನ ಕೋಚ್ : ಮಕ್ಕಳಿಗೆ ಹೋಮ್‌ವರ್ಕ್ ಮಾಡಿಸುವುದಿರಲಿ ಅಥವಾ ಗಂಡನಿಗೆ ಸಮಾಜದಲ್ಲಿ ಹೇಗೆ ವರ್ತಿಸಬೇಕು ಎಂದು ನೆನಪಿಸುವುದಿರಲಿ, ಅವಳು ಒಬ್ಬ ಅದ್ಭುತ ಮೆಂಟರ್. ಮಕ್ಕಳಿಗೆ ಗಣಿತ ಕಲಿಸುವಾಗ ಅವಳು ತೋರುವ ತಾಳ್ಮೆ (ಕೆಲವೊಮ್ಮೆ ತಾಳ್ಮೆಯ ಕೊರತೆಯೂ ಸಹ) ದೊಡ್ಡ ದೊಡ್ಡ ಕೋಚಿಂಗ್ ಸೆಂಟರ್‌ಗಳಿಗೂ ಸವಾಲು.

ಇನ್ನು ಗಂಡನಿಗೆ ಜೀವನದ ಸಣ್ಣಪುಟ್ಟ ಸಮಸ್ಯೆಗಳ ಬಗ್ಗೆ ಅವಳು ನೀಡುವ ಸಲಹೆಗಳು ಕೆಲವೊಮ್ಮೆ ಚಾಣಕ್ಯ ನೀತಿಗಿಂತಲೂ ಉತ್ತಮವಾಗಿರುತ್ತವೆ .ಅವಳು ಹೇಳಿಕೊಟ್ಟ ದಾರಿಯಲ್ಲಿ ನಡೆದರೆ ಸಂಸಾರ ನೌಕೆ ಸುಸೂತ್ರ; ಇಲ್ಲದಿದ್ದರೆ ದಿಕ್ಕು ಹುಡುಕುವ ಕೆಲಸ ಶುರು!

ಫ್ಯಾಷನ್ ಡಿಸೈನರ್ ಮತ್ತು ಸೌಂದರ್ಯ ವಿಮರ್ಶಕಿ : ಯಾವುದಾದರೂ ಪಾರ್ಟಿಗೆ ಹೋಗಬೇಕಾದರೆ ಗಂಡ ತನಗೆ ಬೇಕಾದ ಬಟ್ಟೆ ಆರಿಸಿಕೊಳ್ಳುವ ಸ್ವಾತಂತ್ರ್ಯ ಅವನಿಗಿರಬಹುದು. ಆದರೆ ಅಂತಿಮ ಅನುಮೋದನೆ ಮಾತ್ರ ಮನೆಯ ಫ್ಯಾಷನ್ ತಜ್ಞೆಯದ್ದೇ! ಈ ಶರ್ಟ್ ಹಾಕಿಕೊಳ್ಳಬೇಡಿ, ಇದು ಹಳೆಯದಾಗಿದೆ , ಈ ಪ್ಯಾಂಟ್ ನಿಮಗೆ ಸರಿಯಾಗಿ ಕಾಣುವುದಿಲ್ಲ ಎಂಬ ಮಾತುಗಳೊಂದಿಗೆ ಅವಳು ಗಂಡನನ್ನು ಸಿದ್ಧಪಡಿಸುತ್ತಾಳೆ. ಅವಳೇ ನಿಮ್ಮ ಪರ್ಸನಲ್ ಫ್ಯಾಷನ್ ಡಿಸೈನರ್. ಅವಳು ಆರಿಸಿಕೊಟ್ಟ ಬಟ್ಟೆ ಹಾಕಿಕೊಂಡ ಮೇಲೆ ಕನ್ನಡಿಯಲ್ಲಿ ಒಮ್ಮೆ ನೋಡಿಕೊಂಡು, ಹೌದು, ಚೆನ್ನಾಗಿದೆ ಎಂದು ಹೇಳುವುದು ಮಾತ್ರ ಗಂಡನ ಕೆಲಸ!

ಸಂಸಾರದ ತತ್ವಜ್ಞಾನಿ ಮತ್ತು ಗೈಡ್ : ಬದುಕಿನಲ್ಲಿ ಸೋಲು ಬಂದಾಗ, ನೆರೆಹೊರೆಯವರೊಂದಿಗೆ ಕಿರಿಕಿರಿ ಉಂಟಾದಾಗ ಅಥವಾ ಮನಸ್ಸಿಗೆ ಬೇಸರವಾದಾಗ ಹೆಂಡತಿ ನೀಡುವ ತರ್ಕಗಳು ಕೆಲವೊಮ್ಮೆ ಸಾಕ್ರಟೀಸ್‌ಗೂ ಸವಾಲು ಹಾಕುವಂತಿರುತ್ತವೆ. ಜಗತ್ತೇ ಹೀಗೆ, ನಾವು ಹೊಂದಿಕೊಂಡು ಹೋಗಬೇಕು ಎಂದು ಹೇಳುತ್ತಾ ಅವಳು ಒಂದೇ ಕ್ಷಣದಲ್ಲಿ ಫಿಲಾಸಫಿ ಶುರು ಮಾಡುತ್ತಾಳೆ. ಅವಳು ಕೇವಲ ಗೈಡ್ ಅಲ್ಲ; ಗಂಡನ ಮುಖ ನೋಡಿದ ತಕ್ಷಣ ಅವನ ಮನಸ್ಥಿತಿ ಏನು ಎಂಬುದನ್ನು ಅರ್ಥಮಾಡಿಕೊಳ್ಳುವ ಮನೆಯ ಸೈಕಾಲಜಿಸ್ಟ್ ಕೂಡ ಹೌದು.

ಏನಾಯ್ತು ಎಂಬ ಒಂದೇ ಪ್ರಶ್ನೆಗೆ ಗಂಡ ಏನೂ ಇಲ್ಲ ಎಂದರೂ, ಏನೋ ಇದೆ ಎಂಬುದನ್ನು ಅವಳು ಈಗಾಗಲೇ ಅರ್ಥ ಮಾಡಿಕೊಂಡಿರುತ್ತಾಳೆ!

**ಮನೆಯ ಭದ್ರತಾ ಪಡೆ ಮತ್ತು ಪ್ರೊಟೆಕ್ಟರ್**: ಮನೆಗೆ ಬರುವ ಅತಿಥಿಗಳಿಂದ ಹಿಡಿದು ಅನಗತ್ಯ ಮಾರ್ಕೆಟಿಂಗ್ ಕರೆಗಳವರೆಗೆ ಎಲ್ಲವನ್ನೂ ನಿರ್ವಹಿಸುವಲ್ಲಿ ಅವಳದೇ ಆದ ತಂತ್ರವಿರುತ್ತದೆ. ಕುಟುಂಬದ ಮೇಲೆ ಯಾರಾದರೂ ಬೆರಳು ತೋರಿಸಿದರೆ, ಅವಳು ತೋರುವ ರಕ್ಷಣಾ ಕವಚ ಇನ್ನಷ್ಟು ಗಟ್ಟಿಯಾಗುತ್ತದೆ. ಮನೆಯ ಪಾಲಿನ ಅಘೋಷಿತ ಬಾಡಿಗಾರ್ಡ್ ಕೂಡ ಅವಳೇ!

**ಮನೆಯ ಆರೋಗ್ಯ ಸಚಿವೆ**
**: ಮನೆಯಲ್ಲಿ ಯಾರಿಗಾದರೂ ಸಣ್ಣ ಕೆಮ್ಮು ಬಂದರೂ.**

ಶುಂಠಿ ಕಷಾಯದಿಂದ ಹಿಡಿದು ಬಿಸಿನೀರಿನವರೆಗೆ, ಹಿರಿಯರಿಂದ ಕಲಿತ ಅನೇಕ ಸರಳ ಮನೆಮದ್ದುಗಳು ಅವಳ ನೆನಪಿನಲ್ಲಿರುತ್ತವೆ. ಮೊದಲು ಇದನ್ನು ಮಾಡಿ ನೋಡಿ, ಕಡಿಮೆಯಾಗದಿದ್ದರೆ ಡಾಕ್ಟರ್‌ರನ್ನು ಸಂಪರ್ಕಿಸೋಣ ಎಂಬ ಅವಳ ಸಲಹೆಯಲ್ಲಿ ಕಾಳಜಿಯೂ ಇರುತ್ತದೆ, ಜವಾಬ್ದಾರಿಯೂ ಇರುತ್ತದೆ.

ಕುಟುಂಬದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಈ ಪಾತ್ರಕ್ಕೆ ಯಾವುದೇ ಅಧಿಕೃತ ಹುದ್ದೆ ಇಲ್ಲದಿದ್ದರೂ, ಅದರ ಮಹತ್ವ ಮಾತ್ರ ಅಪಾರ.

ಪತ್ತೇದಾರಿ ಮತ್ತು ಗುಪ್ತಚರ ಇಲಾಖೆ : ಹೆಂಡತಿಯ ಪತ್ತೇದಾರಿ ಗುಣದ ಮುಂದೆ ಮನೆಯ ಸಣ್ಣಪುಟ್ಟ ರಹಸ್ಯಗಳೆಲ್ಲ ಹೆಚ್ಚು ಕಾಲ ರಹಸ್ಯವಾಗಿರುವುದಿಲ್ಲ!

ಗಂಡನ ಶರ್ಟ್ ಮೇಲಿರುವ ಒಂದು ಸಣ್ಣ ಕೂದಲು, ಫೋನಿನಲ್ಲಿ ಬಂದ ಒಂದು ವಿಚಿತ್ರ ಮೆಸೇಜ್ ಅಥವಾ ಅವನ ಮಾತಿನಲ್ಲಿ ಕಂಡ ಸಣ್ಣ ಬದಲಾವಣೆ ಇವೆಲ್ಲವೂ ಅವಳ ಗಮನಕ್ಕೆ ಬಂದುಬಿಡುತ್ತವೆ.

ಯಾರು ಅದು , ಎಲ್ಲಿಗೆ ಹೋಗಿದ್ದಿರಿ , ಇಷ್ಟು ಹೊತ್ತು ಏಕೆ ಆಯ್ತು ಎಂಬ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಎಷ್ಟೋ ಗಂಡಂದಿರು ಬೆವರಿಳಿಸಿರಬಹುದು. ಮನೆಯ ಒಳಗಿನ ಶರ್ಲಾಕ್ ಹೋಮ್ಸ್‌ಗೂ ಒಂದು ಸ್ಥಾನವಿದ್ದರೆ ಅದು ಇಲ್ಲಿಯೇ!

ಸುಪ್ರೀಂ ಬಾಸ್ ಮತ್ತು ಇಂಜಿನಿಯರ್ :ಮನೆಯಲ್ಲಿ ಯಾವುದೇ ವಸ್ತು ಕೆಟ್ಟರೂ ಗಂಡ ಅದನ್ನು ರಿಪೇರಿ ಮಾಡಲು ಹೋಗಿ ಇನ್ನಷ್ಟು ಹಾಳು ಮಾಡುವ ಸಾಧ್ಯತೆ ಇರುತ್ತದೆ. ಆದರೆ ಹೆಂಡತಿ ಮಾತ್ರ ಸಮಸ್ಯೆಯನ್ನು ಗಮನಿಸಿ, ಏನು ಮಾಡಬೇಕು ಎಂಬುದನ್ನು ಕ್ಷಣಾರ್ಧದಲ್ಲಿ ನಿರ್ಧರಿಸುತ್ತಾಳೆ. ಮಿಕ್ಸಿಯಿಂದ ಹಿಡಿದು ವಾಷಿಂಗ್ ಮೆಷಿನ್‌ವರೆಗೆ ಮನೆಯ ಪ್ರತಿಯೊಂದು ವಸ್ತುವಿನ ಬಳಕೆ, ನಿರ್ವಹಣೆ ಮತ್ತು ಅದರ ಸಮಸ್ಯೆ ಗಳ ಪರಿಹಾರ ಅವಳಿಗೆ ಗೊತ್ತಿರುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ ಅವಳು ಮನೆಯ ಅಲ್ಟಿಮೇಟ್ ಬಾಸ್ ! ಅವಳು ಹಾಕಿದ್ದೇ ಗೆರೆ, ಅವಳು ಮಾಡಿದ್ದೇ ಕಾನೂನು ಎಂದು ಗಂಡಂದಿರು ತಮಾಷೆ ಮಾಡಬಹುದು. ಆದರೆ ನಿಜವಾಗಿ ನೋಡಿದರೆ, ಮನೆಯ ವ್ಯವಸ್ಥೆ ಸರಾಗವಾಗಿ ಸಾಗುವಂತೆ ಮಾಡುವ ಜವಾಬ್ದಾರಿಯ ದೊಡ್ಡ ಭಾಗ ಅವಳ ಹೆಗಲ ಮೇಲಿದೆ.

ಪರೋಪಕಾರಿ ಮತ್ತು ದಾನಧರ್ಮದ ಶಕ್ತಿ ಹೆಂಡತಿಯ ಹೃದಯದ ವಿಶಾಲತೆಯನ್ನು ಮನೆಯ ಹೊರಗಿನವರಿಗೂ ಕಾಣಬಹುದು. ಬಾಗಿಲಿಗೆ ಬಂದವರಿಗೆ ಕೈಲಾದ ಸಹಾಯ ಮಾಡುವುದು, ಹಳೆಯ ಬಟ್ಟೆಗಳನ್ನು ಅಗತ್ಯವಿರುವವರಿಗೆ ನೀಡುವುದು, ಯಾರಿಗಾದರೂ ಊಟ ಹಂಚುವುದು ಇಂತಹ ಸಣ್ಣಸಣ್ಣ ಕಾರ್ಯಗಳಲ್ಲೇ ಅವಳ ದೊಡ್ಡತನ ವ್ಯಕ್ತವಾಗುತ್ತದೆ. ತನ್ನ ಅಗತ್ಯವನ್ನು ಸ್ವಲ್ಪ ಮುಂದೂಡಿ ಮತ್ತೊಬ್ಬರಿಗೆ ಸಹಾಯವಾಗಲಿ ಎನ್ನುವ ಮನಸ್ಸು ಕುಟುಂಬದ ಮಕ್ಕಳಿಗೂ ಒಂದು ಮೌನ ಪಾಠವಾಗುತ್ತದೆ.

ಹೀಗೆ ಒಬ್ಬ ಹೆಂಡತಿ ಒಂದೇ ದಿನದಲ್ಲಿ ಹತ್ತಾರು ಅವತಾರಗಳನ್ನು ತಾಳಿ ಕುಟುಂಬವೆಂಬ ರಥವನ್ನು ಮುನ್ನಡೆಸುತ್ತಾಳೆ. ಅಡುಗೆಮನೆಯಿಂದ ಹಣಕಾಸಿನವರೆಗೆ, ಮಕ್ಕಳ ವಿದ್ಯಾಭ್ಯಾಸದಿಂದ ಕುಟುಂಬದ ಆರೋಗ್ಯದವರೆಗೆ, ಮನೆಯ ವ್ಯವಸ್ಥೆಯಿಂದ ಸಂಬಂಧಗಳ ನಿರ್ವಹಣೆಯವರೆಗೆ ಅವಳ ಕೆಲಸಗಳಿಗೆ ಕೊನೆಯೇ ಇಲ್ಲ. ಹಾಸ್ಯಕ್ಕಾಗಿ ನಾವು ಅವಳನ್ನು ಸುಪ್ರೀಂ ಬಾಸ್ , ಎಂದು ಕರೆಯಬಹುದು. ಆದರೆ ಅವಳು ಇಲ್ಲದಿದ್ದರೆ ಬದುಕು ನಿಜಕ್ಕೂ ಚುಕ್ಕಾಣಿಯಿಲ್ಲದ ದೋಣಿಯಂತಾಗಬಹುದು.

ಬೆಳಿಗ್ಗೆ ಎದ್ದ ಕ್ಷಣದಿಂದ ರಾತ್ರಿ ಮಲಗುವವರೆಗೆ ಅವಳು ಮಾಡುವ ಅನೇಕ ಕೆಲಸಗಳಿಗೆ ಸಂಬಳವಿಲ್ಲ, ರಜೆಯಿಲ್ಲ, ಪದೋನ್ನತಿಯೂ ಇಲ್ಲ. ಆದರೆ ಅವಳ ಪ್ರೀತಿ, ಕಾಳಜಿ ಮತ್ತು ಜವಾಬ್ದಾರಿಯೇ ಆ ಮನೆಯ ನಿಜವಾದ ಐಶ್ವರ್ಯ. ಆದ್ದರಿಂದ ಹೆಂಡತಿಯೇ ಕೇವಲ ಮನೆಯೊಡತಿ ಅಲ್ಲ; ಅವಳು ಮನೆಯ ನೆನಪು, ಮನೆಯ ವ್ಯವಸ್ಥೆ, ಮನೆಯ ಕಾಳಜಿ ಮತ್ತು ಅನೇಕ ಸಂದರ್ಭಗಳಲ್ಲಿ ಮನೆಯ ಧೈರ್ಯ.

**ಕೊನೆಯ ಮಾತು** : ಹೆಂಡತಿಯೊಂದಿಗೆ ವಾದ ಮಾಡಿ ಗೆಲ್ಲುವುದು ಕಷ್ಟ. ಆದರೆ ಅವಳನ್ನು ಅರ್ಥಮಾಡಿಕೊಂಡು, ಗೌರವಿಸಿ, ಜೊತೆಯಾಗಿ ನಗುತ್ತಾ ಬದುಕುವುದು ಅದೇ ನಿಜವಾದ ಗೆಲುವು!

ಅದಕ್ಕಾಗಿಯೇ ಕವಿ ಕೆ ಎಸ್ ನರಸಿಂಹ ಸ್ವಾಮಿಯವರು ಹೇಳಿರುವುದು ಹೆಂಡತಿಯೊಂದಿಗೆ ಬಡತನ ದೊರೆತನ ಏನೂ ಭಯವಿಲ್ಲ.

ಹೆಂಡತಿಯೊಲುಮೆಯ ಭಾಗ್ಯವನರಿಯದ
ಗಂಡಿಗೆ ಜಯವಿಲ್ಲ.

Wife appreciation ದಿನವಾದ ಇಂದು , ಇಂತಹ ಬಹುರೂಪಿ ಹೆಂಡತಿಗೊಂದು ಅಭಿನಂದನೆ ಸಲ್ಲಿಸೋಣ

# ಮಾನವೀಯತ ಮೊದಲು

## ಮುದ್ದುರಾಮನ ಅರಿವು ಭಾಗ- 6



ಡಾ. ಪ್ರದೀಪಕುಮಾರ ಹೆಬ್ರಿ
98440 18457

**ಸತ್ತ ಹೆಣ ಮೇಲೆದ್ದು ನಿಜಕಥೆಯ ತಿಳಿಸಿದರೆ**
**ದನಿಯನೆತ್ತುವ ಮುನ್ನ ಕೊಲ್ಲುವರು ಮತ್ತೆ**
**ಸತ್ಯಸಂಗತಿ ಎಷ್ಟೊ ಕಡಲಾಳದಲಿ ಲೀನ**
**ಆತ್ಮಶೋಧನೆ ಸೊನ್ನೆ– ಮುದ್ದುರಾಮ**




ನಾನು ಹೇಳುವುದೆಲ್ಲ ಸತ್ಯ' ಅನ್ನುತ್ತಲೇ ಸತ್ಯವನ್ನು ಸುಳ್ಳಾಗಿಸುವವರು ನಮ್ಮೊಡನೆ ಎಷ್ಟು ಮಂದಿಯಿಲ್ಲ ! ಒಬ್ಬೊಬ್ಬರ ಮನಸ್ಥಿತಿ ಒಂದೊಂದು ರೀತಿ. ಆದರೆ ಪ್ರತಿಯೊಬ್ಬರಿಗೂ ಅವರು ಮಾಡಿದ್ದೇ ಸತ್ಯ. ಇತರರು ಮಾಡಿದ್ದು ಸುಳ್ಳು. ನಾವು ಇಂತಹ ಮನಸ್ಥಿತಿಯವರಾದರೆ ನಿಶ್ಚಿತವಾಗಿ ನಮ್ಮಲ್ಲೇಳುವ ಪ್ರಶ್ನೆಯೇ,ವಿಷಮತೆಯ ನೋಟದಲಿ ನಿಜದ ದರ್ಶನವೆಲ್ಲಿ ಎಂಬುದಾಗಿದೆ. ಮನಸ್ಸಿನಲ್ಲಿ ಋಜುತೆ ಸ್ಫುರಿಸಿದರೆ ನಮಗರಿವಾಗುವುದು ' ಏಳು ಬಣ್ಣ ಸೇರಿ ಬಿಳಿಯ ಬಣ್ಣವಾಯಿತು ' ಎಂಬುದರ ಒಳಾರ್ಥ ಮತ್ತು ಅಂತರಾತ್ಮ. ನಮ್ಮ ದಿನಗಳಲ್ಲಿ ಬೇಡ ಎಂಬುದು ಲೌಕಿಕವಾಗಿ ಯಾವುದೂ ಇಲ್ಲ. ' ಬೇಕು ಬೇಕಿದು ಬೇಕು, ಬೇಕು ಎನಗಿನ್ನೊಂದು ' ಎಂದೇ ಆಶಾನಡಿಗೆಯಿರಿಸಿಕೊಂಡವರು ನಾವು. ಸತ್ಯಶೋಧನೆಗಾಗಿ ಜ್ಞಾನ– ವಿಜ್ಞಾನವೆಲ್ಲವೂ ಇದೆ ಎಂಬರಿವು ಇದ್ದಾಗ ಮಾತ್ರ ಧರ್ಮ ದಿವ್ಯತೆಯ ಕಡೆಗೆ ಮೊಗ ಮಾಡುತ್ತದೆ. ಆಗಲೇ ಸತ್ಯವಿಲಾಸ ದ ಪುಳಕ.


ಕ.ಸಿ.ಶಿವಪ್ಪ

ನಾವೆಷ್ಟೇ ಸಿರಿವಂತರಾಗಿರಬಹುದು, ಆದರೆ ಈ ಸಿರಿವಂತಿಕೆ ನಮ್ಮದಾಗಲು ಯಾರೆಷ್ಟು ಕಷ್ಟಪಟ್ಟು ಬೆವರು ಸುರಿಸಿರಬಹುದೆಂಬುದನ್ನು ಅರಿತಿರಬೇಕು. ಸದಾ ಮನದಲ್ಲಿರಬೇಕಾದ ನಿಶ್ಚಿತಾಭಿಪ್ರಾಯವೇ, ಬೆಳಕಸಿರಿ ಎಂದರದು ಬರಿ ಸದ್ದು ಮೋಜಲ್ಲ, ದಿಟದ ಅರಿವೇ ದೀಪ ಎಂಬುದು. ನಾವು ಮಾನವೀಯತೆ ಮೈತುಂಬಿಸಿಕೊಂಡಿರುವ ಮಾನವರಾದಾಗ ಜಗದ ದುಃಖಿತೆ ಅರಿವಾಗುತ್ತದೆ. ನಾವು ಏನನ್ನೂ ಕಲಿಯಬಹುದು, ಯಾರನ್ನೂ ಪರಿಚಯಿಸಿಕೊಳ್ಳಬಹುದು, ಆದರೆ ಮರೆಯದೇ ಬಾರದ ವಿಷಯವೆಂದರೆ ಆತ್ಮಪರಿಚಯ ಕಷ್ಟ ಎಂಬುದನ್ನು.

ಏನೇನೋ ಬೇಯಿಸಿದ, ಕಾಯಿಸಿದ ಪಾತ್ರೆ ಪಡಗಗಳನ್ನು ಚೆನ್ನಾಗಿ ತೊಳೆದರೆ ಕೆಟ್ಟವಾಸನೆ ಇರುವುದಿಲ್ಲ. ನಮ್ಮ ಬದುಕಿನ ಪಾತ್ರೆಯೂ ದಿನದಿನದ ಆಗುಹೋಗುಗಳಲ್ಲಿ ಮಲಿನವಾಗುತ್ತದೆ. ನಮ್ಮ ಬದುಕಿನುದ್ದೇಶ ಹಸನಾಗಿ ಇರಿಸುವುದೇ ಆಗಬೇಕು. ಆದರೆ ನಾವು ವಿಷಯ ಕೇಂದ್ರವ ಬಿಟ್ಟು, ಪರಿಧಿಯಲಿ ಸುತ್ತಾಡಿ ಕಚ್ಚಾಡಿದರೆ, ಬೊಗಳಿದರೆ ಯಾವ ಪ್ರಯೋಜನವೂ ಇಲ್ಲ. ಮನದಲ್ಲಿ ಮನೆಮಾಡಿರುವ ಗದ್ದಲವ ಹೊರಹಾಕಿ ಸ್ವಾಗತಿಸು ನಿಶ್ಯಬ್ಧ ಎಂದೇ ಗುನುಗತೊಡಗಿದರೆ ಸಂತಸದ ಜೀವನವನ್ನು ಸಾಗಿಸಲು ನಾವೇ ಓಂಕಾರ ಬರೆಯಬಹುದು. ಅದರ ಬದಲು ನಮ್ಮಲ್ಲಿ ಕಪಟತನ ಸುಳಿದಲ್ಲಿ ಪಾವಿತ್ರ್ಯಪೊಳ್ಳುತನ ಎಂಬರಿವಿದ್ದರೆ ಮನದಲ್ಲಿ ನಿಶ್ಚಿತವಾಗಿ ಪುಳಕ ಸತ್ಯವಿಲಾಸ. ಅದರಿಂದಲೇ ಆತ್ಮಪರಿಚಯ.

# ಕನ್ನಡಮ್ಮನ ಕುವರ ಅನಂತ್ ನಾಗ್



| ಸ್ನೇಹಾ ಆನಂದ್



ಸ್ನೇಹ ಲೋಕ

ಅನಂತ್ ನಾಗ್ ಎಂದರೆ ತಕ್ಷಣ ನೆನಪಿಗೆ ಬರುವುದು ಸ್ಫುರದ್ರೂಪಿ ನಟ ಹಾಗು ಒಂದು ವೈಶಿಷ್ಟ್ಯ ತುಂಬಿದ ಕಲಾತ್ಮಕ ವ್ಯಕ್ತಿತ್ವ! ಇವರಿಗೆ ದಾದಾ_ಸಾಹೇಬ್_ಫಾಲ್ಕೆ ಪ್ರಶಸ್ತಿ ಬಂದಿದೆಯೆಂದರೆ ತುಂಬಾ ಸಂತೋಷದ ವಿಷಯ, ಹಾಗಂತ ಆಶ್ಚರ್ಯವೇನಲ್ಲ!!!!!

ಈ ಮೇರು ವ್ಯಕ್ತಿತ್ವದ ಕಲಾವಿದನಿಗೆ ಈ ಮೊದಲೇ ಸಿಗಬೇಕಾದ ಫಾಲ್ಕೆ ಪ್ರಶಸ್ತಿ ಈಗ ಸಿಕ್ಕಿದೆ! ತುಂಬು ಹೃದಯದ ಅಭಿನಂದನೆಗಳು ಹಿರಿಯ ಕಲಾವಿದರಾದ ಅನಂತ್ ನಾಗ್ ಅವರಿಗೆ!

ಇವರು ಅಭಿನಯಿಸಿದ ಪ್ರತಿ ಸಿನಿಮಾ ನೋಡಿದಾಗ ಒಂದು ರೀತಿಯಲ್ಲಿ ಮನಸ್ಸು ಮುದಗೊಳ್ಳುತ್ತದೆ! ಇವರು ಮತ್ತು ನಟಿ ಲಕ್ಷ್ಮಿಯ ಜೋಡಿಯಂತೂ ಸಿನಿಮಾ ರಂಗದಲ್ಲಿ ಹೇಳಿ ಮಾಡಿಸಿದಂತಿತ್ತು! ಇವರ ಪ್ರತಿ ಸಿನಿಮಾ ಪೈಸಾ_ವಸೂಲ್ ಎನ್ನುವಂತೆ ಸಿನಿಮಾ ನೋಡಿದವರಿಗೆ ನ್ಯಾಯ ದೊರೆಯುತ್ತದೆ !

ಯಾವುದೇ ಜಾಸ್ತಿ ಹೊಡೆತಬಡೆತವಿಲ್ಲದ, ಹಾಡಿನ ಅಬ್ಬರವಿಲ್ಲದ, ಅತಿ ಮಧುರತೆಯನ್ನೊಳಗೊಂಡ ಭಾವನಾತ್ಮಕವಾದ ಅವರ ಎಲ್ಲಾ ಹಾಡುಗಳು ಈಗಲೂ ಹಸಿರಾಗಿಯೇ ಉಳಿದಿವೆ, ವೀಕ್ಷಕರ ಮನದಲ್ಲಿ, ಅತ್ಯಂತ ಸರಳತೆ ಹೊಂದಿದ ಆದರೆ ಅಷ್ಟೇ ವಿಶೇಷತೆ ಎನಿಸುವ ಸಿನಿಮಾಗಳು ಇವರದು, ಇವರು ಅಭಿನಯಿಸಿದ ಸಿನಿಮಾಗಳ ಬಗ್ಗೆ ಯಾರಲ್ಲಿಯೂ ಅಭಿಪ್ರಾಯ ಕೇಳುವುದು ಬೇಕಿಲ್ಲ, ಸೀದಾ ಥಿಯೇಟರ್ ಗೆ ಹೋಗಿ ನೋಡಿ ಬರಬಹುದು ಅಷ್ಟು ವೈಶಿಷ್ಟ್ಯ ಪೂರ್ಣ ಸಿನಿಮಾಗಳು ಇವರದು ಎಂದು ಹೇಳಿದರೆ ತಪ್ಪಾಗಲಾರದು!



ಈಗಲೂ ಅಷ್ಟೇ ಹೀರೋ, ಹೀರೊಯಿನ್ ಯಾರೇ ಇರಲಿ, ಆ ಸಿನಿಮಾದಲ್ಲಿ ಅನಂತ್ ನಾಗ್ ಅಭಿನಯಸಿದ್ದಾರೆಂದರೆ ಸಾಕು ಆ ಸಿನಿಮಾ ಪೂರ್ಣ ಪ್ರಮಾಣದಲ್ಲಿ ಕಳೆ ಕಟ್ಟುತ್ತದೆ! ಕೌಟುಂಬಿಕ ಕಥೆಗಳನ್ನೇ ಒಳಗೊಂಡಂತಹ ಇವರ ಸಿನಿಮಾ ಅತಿ ಅಬ್ಬರವಿಲ್ಲದೇ ಶಾಂತ ಸಾಗರದಂತೆ ಹಾಗೆಯೇ ನೋಡುತ್ತಲೇ ಇರಬೇಕು ಎನ್ನಿಸುವಷ್ಟು ಮನಸ್ಸಿಗೆ ಹಿತ ನೀಡುವ ಚಿತ್ರಗಳು!

ಇವರು ಯಾವ ನಟರ ಜೊತೆಗೂ ಸರಿಗಟ್ಟಿ ನಿಲ್ಲಲು ಪ್ರಯತ್ನಿಸಲಿಲ್ಲ , ತಮ್ಮದೇ ಆದ ಒಂದು ವಿಶೇಷ ಛಾಪನ್ನು ಮೂಡಿಸಿದ ನಟ! ಯಾರೂ ತಂಟೆಗೂ ಹೋಗದೆ ತಾವು, ತಮ್ಮ ಕೆಲಸ ಇಷ್ಟೇ ಎಂದು ಮುಂದೆ ಸಾಗಿದ ಅತ್ಯಂತ ಸರಳ ವ್ಯಕ್ತಿತ್ವ!

ಇವರು ಸಮಯ ಪ್ರಜ್ಞೆ ಬಗ್ಗೆ ಒಬ್ಬ ನಟಿ ಹೀಗೆ ಹೇಳಿದ್ದರು, ಆ ಸಿನಿಮಾದಲ್ಲಿ ಅನಂತ್ ನಾಗ್ ಇದ್ದಾರೆ ಎಂದರೆ ಆ ಸಿನಿಮಾದ ಶೂಟಿಂಗ್ ಸರಿಯಾದ ಸಮಯಕ್ಕೆ ಪ್ರಾರಂಭವಾಗುತ್ತದೆ ಅತ್ಯಂತ ಶಿಸ್ತಿನ, ತುಂಬಾ ಸರಳ ವ್ಯಕ್ತಿ ಇವರು ಎಂದು ಅಭಿಮಾನವಿಟ್ಟು ಹೇಳಿದ್ದರು! ದಪ್ರಸಿದ್ಧಿಗಾಗಿ ಇವರು ಎಂದೂ ಅಭಿನಯಿಸಿಲ್ಲ, ಪ್ರಸಿದ್ಧಿಯೇ ಇವರನ್ನು ಹುಡುಕಿಕೊಂಡು ಬಂತು! ಕನ್ನಡ ಚಿತ್ರರಂಗವನ್ನು ಮೇರು ಸ್ಥಾನಕ್ಕೆ ತೆಗೆದುಕೊಂಡು ಹೋದ ನಟರಲ್ಲಿ ಇವರೂ ಒಬ್ಬರು! ಅನಂತ್ ನಾಗ್ ಎಂದರೆ ಅನಂತವಾಗಿಯೇ ಇರುವ ಮೇರು ನಟ ಹಾಗು ಸುಂದರ ವ್ಯಕ್ತಿ ಹಾಗು ವ್ಯಕ್ತಿತ್ವದ, ನಮ್ಮ ಕನ್ನಡಮಾತೆಯ ಹೆಮ್ಮೆಯ ಕುವರ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,